ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥


ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ


RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ–24 ಸಂಚಿಕೆ–3 ಪುಟಗಳು–8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಕೃಷ್ಣಶಿಲಾ ಬಿಂಬ ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ

**ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ನೂತನ ಕೃಷ್ಣಶಿಲಾ ವಿಗ್ರಹದ ಪ್ರತಿಷ್ಠೆ ಹಾಗೂ ಬ್ರಹ್ಮಕುಂಭಾಭಿಷೇಕವು ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಕರಕಮಲಗಳಿಂದ ತಾ.03.03.2023 ರಂದು ಪ್ರಾತ:ಕಾಲ ಸಂಪನ್ನಗೊಂಡಿತು.**

ಉಡುಪಿಯ ಅತ್ಯಂತ ಸುಸಜ್ಜಿತ ಮತ್ತು ಪ್ರಥಮ ಪ್ರಾಶಸ್ತ್ಯದ ಸಭಾಂಗಣವಾದ ಶ್ರೀ ಶಾರದಾ ಮಂಟಪದಲ್ಲಿ ನಡೆಯುವ ಶುಭ ಸಮಾರಂಭಗಳಲ್ಲಿ ಶ್ರೀ ದೇವತಾ ಪ್ರಾರ್ಥನೆ ಸಲ್ಲಿಸಲು ದೇವಾಲಯ ಸನ್ನಿಧಿಯೊಂದು ಇರಬೇಕೆಂಬ ಹಿರಿಯರ ಸಂಕಲ್ಪದ ಫಲವಾಗಿ 1988ರಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯ ಆಗಿನ ಪೀಠಾಧೀಶ್ವರರಾದ ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸನ್ನಿಧಾನಂಗಳವರು ಶ್ರೀ ಶಾರದಾ ಮಾತೆಯ ಅಮೃತಶಿಲೆಯ ವಿಗ್ರಹವನ್ನು ಪ್ರತಿಷ್ಠೆ ಮಾಡಿದ್ದರು. ಹಾಗೂ ಅಂದು ಅವರ ಜೊತೆ ಆಗಮಿಸಿದ್ದ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರು ಗೋಪುರವೇರಿ ಕಲಶಗಳನ್ನು ಪ್ರತಿಷ್ಠಾಪಿಸಿದ್ದರು. ಶ್ರೀ ಶಾರದಾ ಮಂದಿರಕ್ಕೆ ದಿನೇದಿನೇ ಬರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಾ ದೇವಳದ ಒಳಗಿರುವ ಸ್ಥಳಾವಕಾಶ ಕಡಿಮೆಯಾಗುವುದೆಂದು ತಿಳಿದುಕೊಂಡ ಆಗಿನ ಆಡಳಿತ ಮಂಡಳಿಯು 2004ರಲ್ಲಿ ಮತ್ತೆ ಮಂದಿರವನ್ನು ನವೀಕರಿಸಿ ವಿಶಾಲ ಒಳಾಂಗಣ ಹಾಗೂ ಸುತ್ತು ಮರದ ಸುಂದರ ತಡೆಗೋಡೆಗಳನ್ನು ನಿರ್ಮಿಸಿತು. ಅಲ್ಲದೆ ಗರ್ಭಗುಡಿಯ ಇಕ್ಕೆಲಗಳಲ್ಲಿ ಶ್ರೀ ಗಣಪತಿ ಮತ್ತು ಶ್ರೀ ಶಂಕರರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತು. ಆ ಸಂಧರ್ಭದಲ್ಲಿ ಮತ್ತೆ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥರು ಕೃಪೆದೋರಿ ಉಡುಪಿಗೆ ಆಗಮಿಸಿ ಬ್ರಹ್ಮಕುಂಭಾಭಿಷೇಕ ನೆರವೇರಿಸಿದ್ದರು.







2020ರಲ್ಲಿ ಶ್ರೀ ಶಾರದಾ ದೇವಸ್ಥಾನದಲ್ಲಿ ನಡೆದ ಬ್ರಹ್ಮಕುಂಭಾಭಿಷೇಕ ಸಮಾರಂಭದಲ್ಲಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಪ್ರಥಮ ಭಾರಿಗೆ ಉಡುಪಿಗೆ ಆಗಮಿಸಿ ಬ್ರಹ್ಮಕುಂಭಾಭಿಷೇಕ ನೆರವೇರಿಸಿ ನಮ್ಮೆಲ್ಲರನ್ನು ಆಶೀರ್ವದಿಸಿದ್ದರು. ಇದೀಗ ಶ್ರೀ ಶಾರದೆಯ ಅಮೃತಶಿಲಾ ವಿಗ್ರಹದಲ್ಲಿ ಭಿನ್ನತೆ ಗೋಚರಿಸಿದ್ದರಿಂದ ನಮ್ಮ ಸಂಘದ ಸಲಹೆಗಾರರೂ, ಶ್ರೀ ಕ್ಷೇತ್ರ ಶೃಂಗೇರಿಯ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ ವೇದಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಶ್ರೀ ಶ್ರೀ ಜಗದ್ಗುರುದ್ವಯರಲ್ಲಿ ಭಿನ್ನವಿಸಿಕೊಂಡಂತೆ ಅವರ ಅಪ್ಪಣೆಯಂತೆ ಮತ್ತೆ ಶ್ರೀ ಶಾರದಾ ಮಾತೆಯ ಕೃಷ್ಣಶಿಲಾ ವಿಗ್ರಹದ ಪುನ:ಪ್ರತಿಷ್ಠೆಯನ್ನು ಮಾಡಲಾಗಿದೆ. ಈ ಪುಣ್ಯ ಕಾರ್ಯದಲ್ಲಿ ಸಾವಿರಾರು ಭಕ್ತ ಬಾಂಧವರು ಪಾಲ್ಗೊಂಡು ಪುನೀತರಾದರು.

(4ನೇ ಪುಟಕ್ಕೆ...)

## ‘ಜ್ಞಾನವಿಲ್ಲದೆ ಪ್ರಪಂಚ ನಡೆಯದು’

### – ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು

"ಮಾನವನ ಯಾವತ್ತೂ ಚಟುವಟಿಕೆಗಳ ಮೂಲ ಕಾರಣ ಜ್ಞಾನ. ಇದನ್ನು ಚೈತನ್ಯ ಅಥವಾ ವಿಜ್ಞಾನ ಎಂದೂ ಕರೆಯಲಾಗುತ್ತದೆ. ಇಷ್ಟು ದೊಡ್ಡ ಪ್ರಪಂಚ ಸೃಷ್ಟಿಯಾಗಿ ಅಲ್ಲಿರುವ ಸೂರ್ಯ–ಚಂದ್ರ–ನಕ್ಷತ್ರಗಳು–ಗಾಳಿ ಮೊದಲಾದುವುಗಳು ಸರಿಯಾದ ಕ್ರಮದಲ್ಲಿ ಸರಿಯಾದ ಸಮಯದಲ್ಲಿ ಸರಿಯಾದ ಕೆಲಸಗಳನ್ನು ನಿರಂತರವಾಗಿ ಮಾಡುತ್ತಲೇ ಇವೆ. ಈ ಕೆಲಸ ನಡೆಯಲು ಅಂತರ್ಯಾಮಿಯಾದ ಚೇತನವೇ ಕಾರಣ. ಆ ಚೇತನವೇ ಸ್ತ್ರೀರೂಪಿಯಾದ ದೇವಿ. ದಕ್ಷಿಣಾಮೂರ್ತಿಯೇ ಪುರುಷರೂಪ. ಯಾವ ರೂಪದಲ್ಲಾದರೂ ಸ್ಮರಣೆ ಮಾಡಿಕೊಂಡು ಉಪಾಸನೆ ಮಾಡಿದರೂ ಜ್ಞಾನ ಪ್ರಾಪ್ತಿಯಾಗುತ್ತದೆ.

ಅಂತೆಯೇ ಆಚಾರ್ಯ ಶಂಕರರು ಜ್ಞಾನ ಸ್ವರೂಪಿಯಾದ ಶ್ರೀ ಶಾರದೆಯನ್ನು ಶೃಂಗೇರಿಯಲ್ಲಿ ಪ್ರತಿಷ್ಠಾಪಿಸಿದ್ದರಿಂದ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠವೆಂದೇ ಪ್ರಸಿದ್ಧವಾಯಿತು. ಈ ಪೀಠದಲ್ಲಿ ವಿರಾಜಮಾನರಾದ ಎಲ್ಲ ಯತಿವರ್ಯರೂ ಮಹಾತಪಸ್ವಿಗಳಾಗಿದ್ದು ಜ್ಞಾನ ಪ್ರಸಾರ ಕಾರ್ಯಕ್ಕೆ ತಮ್ಮದೇ ಆದ ವಿಶಿಷ್ಠ ಕೊಡುಗೆಗಳನ್ನು ನೀಡಿದ್ದಾರೆ. ಇಂದಿಗೂ ಈ ಕ್ಷೇತ್ರ ಜ್ಞಾನ ಸಂಪಾದನೆ ಹಾಗೂ ಜ್ಞಾನ ಪ್ರಸಾರಕ್ಕೆ ಪ್ರಪಂಚಕ್ಕೇ ಮಾದರಿಯಾಗಿದೆ. ಇವೆಲ್ಲ ಶೃಂಗೇರಿ ಶ್ರೀ ಶಾರದೆಯ ಕೃಪೆ.

ಶ್ರೀ ಶಾರದೆಯ ಕೈಯಲ್ಲಿರುವ ಚಿನ್ಮುದ್ರೆ–ಜ್ಞಾನದ ಪ್ರತೀಕ. ಪುಸ್ತಕ–ಓದಿ ತಿಳಿದುಕೊಂಡು ಜ್ಞಾನ ಸಂಗ್ರಹಿಸುವ ಪ್ರತೀಕ. ಜಪಮಾಲೆ–ನಿರಂತರ ಅಧ್ಯಯನದ ಪ್ರತೀಕ. ಗಿಳಿ–ಇವುಗಳೆಲ್ಲವನ್ನು ತಿಳಿದುಕೊಂಡು ಮಾಡುವ ಅನುಕರಣೆಯ ಪ್ರತೀಕ. ಈ ನಾಲ್ಕು ಸಂಕೇತಗಳನ್ನು ನಾವು ನಿರಂತರ ಅನುಸರಿಸಬೇಕೆಂಬುದೇ ಇದರ ಕಲ್ಪನೆ.

ಚೈತನ್ಯ ಸ್ವರೂಪಿಯಾದ ದೇವರು ಯಾವ ರೂಪದಲ್ಲಿದ್ದರೂ ಉಪಾಸನೆ ಮಾಡಬಹುದು. ಆದರೆ ಒಂದು ರೂಪವನ್ನು ಹೊಗಳುವುದರಿಂದ ಪ್ರಾರಂಭಿಸಿ ಇನ್ನೊಂದು ರೂಪವನ್ನು ನಿಂದಿಸುವ ಕೆಲಸವನ್ನು ಮಾಡಬಾರದು. ಯಾರಿಗೆ ಯಾವ ಸ್ವರೂಪ ಒಪ್ಪಿಗೆಯೋ ಅದೇ ಸ್ವರೂಪವನ್ನು ಒಪ್ಪಿಕೊಂಡು ಉಪಾಸನೆ ಮಾಡಲಿ. ಭಜನೆ ಈ ಯುಗದಲ್ಲಿ ಉಪಾಸನೆಗೆ ಯೋಗ್ಯ ಮಾರ್ಗವಾಗಿದೆ.

ಅಂತೆಯೇ ನಮ್ಮ ಪರಮಗುರುಗಳು ಮತ್ತು ಗುರುಗಳು ಈ ಉಡುಪಿಯಲ್ಲಿ ಶ್ರೀ ಶಾರದೆಯ ಪ್ರತಿಷ್ಠೆಯನ್ನು ಮಾಡಿ ಇಲ್ಲಿಯೂ ನಿರಂತರ ಜ್ಞಾನ ಕಾರ್ಯ ನಡೆಯುವಂತೆ ಮಾಡಿದ್ದಾರೆ. ಇಂದು ನಾವು ಮತ್ತೆ ಕೃಷ್ಣಶಿಲಾ ಬಿಂಬದ ಪ್ರತಿಷ್ಠೆ–ಕುಂಭಾಭಿಷೇಕ ಮಾಡಿದ್ದೇವೆ. ನಿಮ್ಮೆಲ್ಲರ ಶ್ರಮದ ಫಲವಾಗಿ ಈ ಕಾರ್ಯ ಸಂಪನ್ನಗೊಂಡಿದೆ. ನಮ್ಮ ಹಿರಿಯ ಗುರುಗಳೀರ್ವರೂ ಆಗಮಿಸಿ ವಿಶೇಷವಾಗಿ ಸ್ಥಾನಿಕ ಸಮಾಜಕ್ಕೆ ಅನುಗ್ರಹ ಮಾಡಿದ್ದಾರೆ. ಅದರಂತೆ ನಮಗೂ ಇಂದು ಅತೀವ ಸಂತೋಷವಾಗಿದೆ. ನಿಮ್ಮೆಲ್ಲರ ಇಚ್ಚೆಯಂತೆ ಪುನ:ಪ್ರತಿಷ್ಠೆ ಕುಂಭಾಭಿಷೇಕ ನೆರವೇರಿಸಿದ್ದೇವೆ. ಇದರಿಂದ ಎಲ್ಲರಿಗೂ ಸನ್ಮಂಗಲವಾಗಲಿ" ಎಂದು ಆಶೀರ್ವದಿಸಿದರು.

## ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ

### "ಸಂಸ್ಕಾರ, ಸಂಸ್ಕೃತಿ ಬೆಳೆಯಲು ಸಮ್ಮೇಳನ ಸಹಕಾರಿ"–ಡಾ। ಹೆಗ್ಗಡೆ



ಸಂಸ್ಕಾರ ಸಂಸ್ಕೃತಿಗಳು ನಮ್ಮ ಗೌರವವನ್ನು ಹೆಚ್ಚಿಸುತ್ತವೆ. ಜಾತಿ, ಮತ, ಸಂಘಟನೆಗಳು ಹುಟ್ಟಿಕೊಂಡಿರುವುದು ಏಕತೆಗಾಗಿ ಹೊರತು ಪತ್ಯೇಕತೆಗಾಗಿ ಅಲ್ಲ. ಪ್ರತಿಯೊಬ್ಬರಲ್ಲೂ ಸಂಘಟಿತ ಮನೋಭಾವ ಬೆಳೆಯಬೇಕು. ಸಂಸ್ಕಾರ, ಸಂಸ್ಕೃತಿ ಬೆಳೆಸಿದಾಗ ವ್ಯಕ್ತಿತ್ವ ಹೆಚ್ಚಾಗುತ್ತದೆ. ಹಿರಿಯರ ಸಂಸ್ಕಾರಗಳು ಜೀವನ ಪಾಠ ಕಲಿಸುತ್ತಿದ್ದು ಅದಕ್ಕಾಗಿ ಸಂಸ್ಕಾರ, ಸಂಸ್ಕೃತಿ ಉಳಿಸಿ ಬೆಳೆಸುವ ಅಗತ್ಯವಿದ್ದು ಅದಕ್ಕೆ ಇಂತಹ ಸಮ್ಮೇಳನಗಳು ಸಹಕಾರಿಯಾಗಲಿ ಎಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಅವರು ಮಾ.4 ರಂದು ಬೆಳ್ತಂಗಡಿಯ ಲ್ಯಾಲ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಎರಡು ದಿನ ನಡೆದ ವಿಶ್ವಮಟ್ಟದ 5ನೇ ಸ್ಥಾನಿಕ ಬ್ರಾಹ್ಮಣ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಜಾತಿಯ ಮೇಲು ಕೀಳು ಭಾವನೆ ದೂರವಾಗಿ ಸಮಾನತೆಯ ಮನೋಭಾವ ಹೆಚ್ಚಾಗಿದೆ. ನಾವು ವಿಶ್ವಮಾನವರಾಗಲು ಸಂಕುಚಿತ ಮನೋಭಾವವನ್ನು ದೂರಮಾಡಬೇಕು. ಸಂಸ್ಕಾರ, ದೃಷ್ಟಿಕೋನದಲ್ಲಿ ವ್ಯತ್ಯಾಸವಿದ್ದರೂ ವ್ಯವಹಾರದಲ್ಲಿ ವ್ಯತ್ಯಾಸ ಬೇಡ. ಇನ್ನೊಬ್ಬರನ್ನು ತುಳಿದು ಮೇಲೆ ಬರಬೇಕಾಗಿಲ್ಲ, ನಮ್ಮತನದಿಂದ ನಾವು ಮೇಲೆ ಬರಬೇಕು. ಅವಕಾಶಗಳನ್ನು ಬಳಸಿ ಸಂಘಟಿತರಾಗಲು ಪ್ರಯತ್ನಿಸಬೇಕು. ಸಮ್ಮೇಳನ ವಿಶಾಲ ಹೃದಯವಂತಿಕೆಗೆ ಸಹಕಾರಿಯಾಗುವ ಜೊತೆಗೆ ವಿಶ್ವ ಮಾನವರಾಗಲು ಸಹಕಾರಿಯಾಗಲಿ ಎಂದು ಅವರು ಹೇಳಿದರು.

(5ನೇ ಪುಟಕ್ಕೆ...)

# ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ







ಉಡುಪಿ ಕುಂಜಿಬೆಟ್ಟು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಶ್ರೀ ಶಾರದಾ ದೇವಸ್ಥಾನದಲ್ಲಿ ದಿನಾಂಕ 18.02.2023ನೇ ಶನಿವಾರದಂದು ಪೂರ್ವಾಹ್ನ 9.30 ಗಂಟೆಗೆ ಪ್ರಾರ್ಥನೆಯೊಂದಿಗೆ ಮಹಾಶಿವರಾತ್ರಿ ಕಾರ್ಯಕ್ರಮವು ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಋತ್ವಿಜರೊಂದಿಗೆ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಪಿ.ಪ್ರಭಾಕರ ಭಂಡಿ, ಉಪಾಧ್ಯಕ್ಷ ಶ್ರೀ ಅರವಿಂದ ಕುಮಾರ್, ಪದಾಧಿಕಾರಿಗಳು ಹಾಗೂ ಸಲಹೆಗಾರರು ಜೊತೆಗಿದ್ದರು.

ಮಹಾಶಿವರಾತ್ರಿ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಪಿ. ಸತೀಶ ರಾವ್ ದಂಪತಿಗಳು ಪೂಜಾ ಸಂಕಲ್ಪಗೈದರು. ಋತ್ವಿಜರಾದ ಪಾವಂಜೆ ಸುಬ್ರಹ್ಮಣ್ಯ ಉಪಾಧ್ಯಾಯರು, ಭವಾನಿಶಂಕರ ಉಪಾಧ್ಯಾಯರು ಹಾಗೂ ಪಾವಂಜೆ ರವಿ ಉಪಾಧ್ಯಾಯರು ಮಹಾಶಿವರಾತ್ರಿಯ ಪ್ರಯುಕ್ತ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು. ಸ್ವಾಧ್ಯಾಯ ತಂಡದವರು ರುದ್ರಪಾರಾಯಣ ಮಾಡಿದರು. ಪೂರ್ವಾಹ್ನ 10.30 ಗಂಟೆಗೆ ಭಜನಾ ಕಾರ್ಯಕ್ರಮವು ಜ್ಞಾನಮಂದಿರದಲ್ಲಿ ಪ್ರಾರಂಭಗೊಂಡಿತು.

ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಪಡುಬಿದ್ರೆ ಹಾಗೂ ಶ್ರೀ ಶಾರದಾ ಭಜನಾ ಮಂಡಳಿ, ಕುಂಜಿಬೆಟ್ಟು, ಉಡುಪಿ ಇಲ್ಲಿಯ ಮಹಿಳಾ ಭಜನಾ ತಂಡದಿಂದ ಭಜನಾ ಕಾರ್ಯಕ್ರಮವು ನೆರವೇರಿತು. ಶ್ರೀ ಶಾರದಾ ದೇವಸ್ಥಾನದಲ್ಲಿ ನಮ್ಮ ಸಮಾಜ ಬಾಂಧವರು ಮತ್ತು ಸಾರ್ವಜನಿಕರಿಂದ ರುದ್ರಾಭಿಷೇಕ ಸೇವೆಯು ನೆರವೇರಿತು. ಅಪರಾಹ್ನ 1ಕ್ಕೆ ಮಹಾಶಿವರಾತ್ರಿ ವಿಶೇಷ ಮಹಾಪೂಜೆಯನ್ನು ನೆರವೇರಿಸಲಾಯಿತು. ನಂತರ ಫಲಹಾರ ಕಾರ್ಯಕ್ರಮದೊಂದಿಗೆ ಮಹಾಶಿವರಾತ್ರಿಯು ಸಂಪನ್ನಗೊಂಡಿತು.

ಈ ಎಲ್ಲಾ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯಲು ಸಂಘದ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಸಹಕರಿಸಿದ್ದರು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಉಪ್ಪುಂದದಲ್ಲಿ ಶ್ರೀ ರುದ್ರಹೋಮ ಸಂಪನ್ನ



ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾದವರಿಂದ ಬೈಂದೂರು ತಾಲೂಕು ಉಪ್ಪುಂದದ ಅರಮಕೋಡಿ ಶ್ರೀ ಈಶ್ವರ ದೇವಸ್ಥಾನದಲ್ಲಿ ದಿನಾಂಕ 15.02.2023ರಂದು ರುದ್ರ ಹೋಮ ಸಂಪನ್ನಗೊಂಡಿತು. ನಮ್ಮ ಸಮಾಜದ ಸುಮಾರು 18 ಮಂದಿ ಋತ್ವಿಜರ ಸಹಯೋಗದಿಂದ ಹಾಗೂ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ರುದ್ರ ಹೋಮವು ಜರಗಿತು. ಬೆಳಿಗ್ಗೆ 7.30ಕ್ಕೆ ಪ್ರಾರಂಭಗೊಂಡ ರುದ್ರಹೋಮವು ಶ್ರೀಕೃಷ್ಣರಾಜ ಭಟ್‌ರವರ ಅಧ್ವರ್ಯದಲ್ಲಿ 11.30ಕ್ಕೆ ಪೂರ್ಣಾಹುತಿ ನೆರವೇರಿತು. ನಂತರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣರಾಜ ಭಟ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ದ್ರಾವಿಡ ಬ್ರಾಹ್ಮಣ ಪರಿಷತ್ ಉಪ್ಪುಂದ ವಲಯದ ಅಧ್ಯಕ್ಷರಾದ ಶ್ರೀ ಅರುಣ್ ಶ್ಯಾನುಭೋಗ್ ಹಾಗೂ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಹೆಬ್ಬಾರ್ ಉಪಸ್ಥಿತರಿದ್ದರು. ಸಭಾದ ಮಾರ್ಗದರ್ಶಕರಾದ ಶ್ರೀ ವಾಗೀಶ ಶಾಸ್ತ್ರಿಯವರು ಧಾರ್ಮಿಕ ಉಪನ್ಯಾಸ ನೀಡಿದರು. ಕಾರ್ಯದರ್ಶಿ ಚಿದಾನಂದ ಶ್ಯಾನುಭೋಗ್ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣಗೈದರು. ಮುಖ್ಯಕಾರ್ಯಸಂಚಾಲಕ ಪ್ರಶಾಂತಶರ್ಮ ವಂದಿಸಿದರು. ಕೋಶಾಧಿಕಾರಿ ಪ್ರತಾಪರಾವ್ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ದೇವತಾ ಕೈಂಕರ್ಯವನ್ನು ವಿಧಿವತ್ತಾಗಿ ನೆರವೇರಿಸಿದ ಎಲ್ಲಾ ಋತ್ವಿಜರಿಗೂ ದೇವಸ್ಥಾನದ ಭಕ್ತಮಂಡಳಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |


(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

# ಬೆಳ್ತಂಗಡಿ ಬ್ರಾಹ್ಮಣ ಸಭಾದ ರಜತ ಸಂಭ್ರಮ



ಬೆಳ್ತಂಗಡಿ ಬ್ರಾಹ್ಮಣ ಸಭಾವು 25 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿ ಇದೀಗ ಇಪ್ಪತ್ತಾರನೇ ವರ್ಷಕ್ಕೆ ಪಾದಾರ್ಪಣೆಯುತ್ತಿದೆ. ಈ ಸಂದರ್ಭದಲ್ಲಿ ಬೆಳ್ತಂಗಡಿ ಸಭಾದ ರಜತಮಹೋತ್ಸವವನ್ನು 25.02.2023 ಮತ್ತು 26.02.2023ರಂದು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. 25.02.2023 ಶನಿವಾರದಂದು ಅಪರಾಹ್ನ ಆರಂಭವಾದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶೃಂಗೇರಿ ಮಠದ ದಕ್ಷಿಣ ಕನ್ನಡ ಪ್ರಾಂತೀಯ ಧರ್ಮಾಧಿಕಾರಿಗಳಾದ ಶ್ರೀ ಬೊಳ್ವಾವ ಸತ್ಯಶಂಕರ ರಾವ್‌ರವರು ಉದ್ಘಾಟಿಸಿದರು. ತನ್ನ ಉದ್ಘಾಟನಾ ಭಾಷಣದಲ್ಲಿ 25 ವರ್ಷಗಳ ಹಿಂದೆ ತನ್ನ ಅಧ್ಯಕ್ಷತೆಯಲ್ಲಿ ಉದ್ಘಾಟನೆಗೊಂಡ ಒಂದು ಸಂಘವು ಯಶಸ್ವಿಯಾಗಿ ರಜತೋತ್ಸವವನ್ನು ಆಚರಣೆ ಮಾಡುತ್ತಿರುವುದು ಸಂತಸವನ್ನು ಉಂಟುಮಾಡಿದೆ. ಈ ಸಂಘದಲ್ಲಿ ಪದಾಧಿಕಾರಿಗಳಾದವರ ನಿಸ್ವಾರ್ಥ ಸೇವೆಯ ಪರಿಣಾಮ ಈ ಸಂಘ ಇಷ್ಟು ಬೆಳೆಯಲು ಕಾರಣವಾಗಿದೆ. ಅಲ್ಲದೆ ಕಡಿಮೆ ಸಂಖ್ಯೆಯಲ್ಲಿ ಕುಟುಂಬಗಳನ್ನು ಹೊಂದಿರುವ ಬೆಳ್ತಂಗಡಿಯ ಸಂಘವು ತನ್ನದೇ ಆದ ಸ್ವಂತ ಕಟ್ಟಡವನ್ನು ಹೊಂದಿ ಯಶಸ್ವಿ ಕಾರ್ಯಕ್ರಮಗಳನ್ನು ಆಯೋಜಿಸಿ ಕೊಂಡು ಹೋಗುತ್ತಿರುವುದು ತುಂಬಾ ಆನಂದದಾಯಕವಾಗಿದೆ. ಮುಂದೆಯೂ ಈ ಸಭಾವು ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುವಂತಾಗಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಡಿವೈಎಸ್ಪಿ ಶ್ರೀ ಕೆ. ಎಲ್.ರಾವ್‌ರವರು ರಜತಸಂಚಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಾ ಸ್ಥಾನಿಕ ಬ್ರಾಹ್ಮಣರು ಅಮೇರಿಕಾದಲ್ಲೂ ಸಮಾಜ ಬಂಧುಗಳನ್ನು ಸೇರಿಸಿ ಶಂಕರ ಮಠವನ್ನು ಆರಂಭಿಸಿದ್ದಾರೆ. ಇದು ನಮ್ಮವರ ಶಕ್ತಿ. ಬೆಳ್ತಂಗಡಿ ಸಂಘವು ಅನೇಕ ಸಮಾಜ ಸೇವೆಯನ್ನು ಮಾಡಿದ್ದು, ಮುಂದೆಯೂ ಯಶಸ್ವಿಯಾಗಿ ಸಾಗಲಿ ಎಂದು ಹಾರೈಸಿದರು.

ಅತಿಥಿಯಾಗಿದ್ದ ಮಹಾಮಂಡಲದ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್‌ರವರು ಮಾತನಾಡಿ ಬೆಳ್ತಂಗಡಿ ಸಂಘವು ಮಾದರಿಯಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಸ್ಥಾನಿಕ ಸಮಾವೇಶವನ್ನು ಯಶಸ್ವಿಯಾಗಿ ನಡೆಸಬಲ್ಲರು ಎಂಬ ನಂಬಿಕೆಯಿಂದ ಈ ವರ್ಷದ ವಿಶ್ವಮಟ್ಟದ

(3ನೇ ಪುಟಕ್ಕೆ...)

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ಬೆಳ್ತಂಗಡಿ ಬ್ರಾಹ್ಮಣ ಸಭಾದ ರಜತ ಸಂಭ್ರಮ

■...2ನೇ ಪುಟದಿಂದ

ಸ್ಥಾನಿಕ ಬ್ರಾಹ್ಮಣ ಸಮಾವೇಶವನ್ನು ಬೆಳ್ತಂಗಡಿಯಲ್ಲಿ ನಡೆಸಲಾಗುತ್ತಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ. ರಾಧಾಕೃಷ್ಣ ರಾವ್‌ರವರು ಮಾತನಾಡಿ ಸಭಾವು ಆರಂಭಗೊಂಡಾಗ ಇದ್ದ ಪರಿಸ್ಥಿತಿಗಳನ್ನು ತಿಳಿಸಿ, ಈಗ ಬೆಳೆದು ಇದಕ್ಕೆ ಕಾರಣರಾದ ಎಲ್ಲಾ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಸಭಾದ ಸ್ಥಾಪಕ ಪದಾಧಿಕಾರಿಗಳನ್ನು ಗೌರವಿಸಲಾಯಿತು. 1997ರಿಂದ 2023ರವರೆಗೆ ಸಭಾದ ಕಟ್ಟಡ ಸಮಿತಿಯ ಮಹಿಳಾ ವೇದಿಕೆಯ, ಯುವವೇದಿಕೆಯ ವಲಯ ವೇದಿಕೆಯ ಅಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

ಆಮಂತ್ರಣ ಪತ್ರಿಕೆ ಹಾಗೂ ಇತರ ಮುದ್ರಣಗಳನ್ನು ಮಾಡಿಸುವ ಸಂದರ್ಭ ಸಹಕಾರ ನೀಡುತ್ತಿರುವ ಶ್ರೀಮತಿ ಪ್ರಭಾ ವಿನಯಕುಮಾರ್‌ರವರನ್ನು, ನಮ್ಮ ಸಭಾದ ವಾರ್ಷಿಕ ಲೆಕ್ಕಪತ್ರಗಳನ್ನು ಯಾವುದೇ ಸಂಭಾವನೆ ಪಡೆಯದೇ ಆಡಿಟ್ ಮಾಡಿಕೊಡುತ್ತಿರುವ ಶ್ರೀ ಸಂದೇಶ್ ರಾವ್ ರವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ನಮ್ಮ ಸಭಾಕ್ಕೆ ಆರಂಭದಲ್ಲಿ ದೊಡ್ಡ ಮೊತ್ತದ ಧನ ಸಹಾಯವನ್ನು ನೀಡಿ ಪ್ರೋತ್ಸಾಹಿಸಿದ ಶ್ರೀ ನಿರಂಜನ ರಾವ್‌ರವರ ಪರವಾಗಿ ಸಹೋದರ ಶ್ರೀ ನವೀನ್ ಚಂದ್ರರಾವ್ ದೇವರನ್ನು, ಹಿರಿಯರಾದ ಶ್ರೀ ಚಂದ್ರಶೇಖರ ರಾವ್‌ರವರನ್ನು ನಮ್ಮ ಸಮಾಜದ ದೇವಸ್ಥಾನವನ್ನು ಉಳಿಸಿ ಬೆಳೆಸಿದ ಕಾರಣ ಹಾಗೂ ಭಜನೆಯನ್ನು ಆರಂಭಿಸಿ ಇಂದು ಮನೆಮನೆಗಳಲ್ಲೂ ಭಜನೆಯಾಗುವಂತೆ ಮಾಡಿದ್ದಕ್ಕಾಗಿ ಗೌರವಿಸಲಾಯಿತು. ಧರ್ಮಸ್ಥಳದ ಶ್ರೀಮತಿ ಸ್ವರ್ಣ ಗೌರಿ ಲಕ್ಷ್ಮೀನಾರಾಯಣ ರಾವ್‌ರವರನ್ನು ಉಜಿರೆಯಲ್ಲಿ ಮಹಿಳಾ ಸಹಕಾರಿ ಸಂಘವನ್ನು ಸ್ಥಾಪಿಸಿ ಅದರ ಕಾರ್ಯನಿರ್ವಹಣಾಧಿಕಾರಿಯಾಗಿ ಆಯ್ಕೆಯಾಗಿದ್ದಕ್ಕಾಗಿ ಗೌರವಿಸಲಾಯಿತು. ಸಂಘಕ್ಕೆ ಅತೀ ಹೆಚ್ಚು ಸಹಾಯಧನ ಕೊಡಿಸಿ, ಅಡಿಗೆ ಪಾತ್ರ, ಕುರ್ಚಿ, ಟೇಬಲ್‌ಗಳನ್ನು ಒದಗಿಸಿದ್ದಕ್ಕಾಗಿ ರಾವ್ ಕುಟುಂಬದ ಪರವಾಗಿ ಶ್ರೀ ರಘುಚಂದ್ರ ರಾವ್‌ರವರನ್ನು ಗೌರವಿಸಲಾಯಿತು. ಸಭಾದ ಆರಂಭದಲ್ಲಿ ದಿನಗಳಲ್ಲಿ ಸಮಾಜದಲ್ಲಿ ನಡೆದ ಎಲ್ಲಾ ಕಾರ್ಯಕ್ರಮಗಳ ಛಾಯಾಚಿತ್ರವನ್ನು ಉಚಿತವಾಗಿ ತೆಗೆದುಕೊಡುತ್ತಿದ್ದ ಉಜಿರೆ ಮಂಗಳ ಸ್ಟುಡಿಯೋದ ಶ್ರೀ ಸೋಮಶೇಖರ ರಾವ್‌ರವರನ್ನು ಕೂಡಾ ಗೌರವಿಸಲಾಯಿತು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ರಜತಸಂಭ್ರಮ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ವಹಿಸಿದ್ದರು. ಮುಖ್ಯಅತಿಥಿಯಾಗಿ ಭಾಗವಹಿಸಿದ್ದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಮಾತನಾಡುತ್ತಾ ಈ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ತಾನು ಭಾಗವಹಿಸಿದ್ದು. ನಾನು ಕೂಡಾ ಓರ್ವ ದೊಡ್ಡ ವ್ಯಕ್ತಿ ಎಂದು ತೋರಿಸಿದ ಸಂಘ ಬೆಳ್ತಂಗಡಿ ಸಂಘ. ಅದಕ್ಕಾಗಿ ಈ ಸಂಘಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು. ದೇವಸ್ಥಾನಗಳು ಉಳಿವಿಗೆ ಶ್ರಮಿಸುತ್ತಿರುವ ಈ ಸಂಘದ ಕೆಲಸ ಸ್ತುತ್ಯಾರ್ಹ ಎಂದು ಸಂಘದ ಉತ್ತರೋತ್ತರ ಅಭಿವೃದ್ಧಿಗೆ ಆಶೀರ್ವದಿಸಿದರು. ಅತಿಥಿಗಳಾಗಿದ್ದ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀ ನವೀನ್ ಚಂದ್ರರಾವ್‌ರವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸಭಾದ ಪೂರ್ವಾಧ್ಯಕ್ಷರುಗಳನ್ನು ಕಿರುಕಾಣಿಕೆ ನೀಡಿ ಗೌರವಿಸಲಾಯಿತು. ಸಭಾಕ್ಕೆ ನೀಡಿದ ಅನನ್ಯ ಸೇವೆಗಾಗಿ ಪಿ. ಲಕ್ಷ್ಮೀನಾರಾಯಣ ರಾವ್‌ರವರನ್ನು ಬೆಳ್ಳಿಯ ತಟ್ಟೆ ನೀಡಿ ಗೌರವಿಸಲಾಯಿತು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ಈ ಸಭಾದ ಏಳಿಗೆಗಾಗಿ ಶ್ರಮಿಸಿದ ಎಲ್ಲರನ್ನೂ ಸ್ಮರಿಸಿಕೊಂಡರು. ತಮ್ಮ ಕುಟುಂಬವೂ ಆರಂಭದಿಂದ ಈವರೆಗೂ ಯಾವುದೇ ಲೋಪವಿಲ್ಲದೆ, ಸಭಾದ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು. ರಜತ ಸಂಭ್ರಮದಲ್ಲಿ ಧರ್ಮಸ್ಥಳ ವಲಯದ ಶ್ರೀ ಕೃಷ್ಣ ಪರಿಣಯ ಕಂಸವಧೆ, ಉಜಿರೆ ವಲಯದ ಪಂಚವಟಿ, ಬೆಳ್ತಂಗಡಿ ವಲಯದ ಕಟೀಲು ಕ್ಷೇತ್ರ ಮಹಾತ್ಮೆ ರೂಪಕಗಳು ಅದ್ಭುತವಾಗಿ ಮೂಡಿಬಂದವು. ಸದಸ್ಯರುಗಳಲ್ಲಿ ಅಡಗಿದ್ದ ಸುಪ್ತ ಪ್ರತಿಭೆಗಳನ್ನು ಪರಿಚಯಿಸಲು ಸಹಕಾರಿಯಾಯಿತು. ವೃತ್ತಿಪರ ಕಲಾವಿದರಿಗೆ ಸಡ್ಡು ಹೊಡೆಯುವಂತೆ ಕಲಾವಿದರು ನಟಿಸಿದರು. ಬಂಗಾಡಿ ಮತ್ತು ನಾರಾವಿ ವಲಯದಿಂದಲೂ ಉತ್ತಮ ಕಾರ್ಯಕ್ರಮ ಪ್ರದರ್ಶನಗೊಂಡವು.

ಇದೇ ಸಂದರ್ಭದಲ್ಲಿ ಉಡುಪಿಯಲ್ಲಿ ಆರಂಭವಾಗುವ ಶೃಂಗೇರಿ ಶ್ರೀಮಠದ ಶಾಖಾಮಠದ ಜಾಗ ಖರೀದಿಗಾಗಿ ನಮ್ಮ ಸಭಾದ ವತಿಯಿಂದ ರೂ.1,00,000 ಮೊತ್ತದ ಸಹಾಯಧನವನ್ನು ಘೋಷಿಸಲಾಯಿತು.

## ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ

■...1ನೇ ಪುಟದಿಂದ

ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಕರ್ತರಾದ ಭೀಮೇಶ್ವರ ಜೋಶಿ ಶುಭಾಶಂಸನಗೈದು ಬ್ರಾಹ್ಮಣವೆಂಬ ಮಹಾವೃಕ್ಷದ ಕೊಂಡಿ ಸ್ಥಾನಿಕ ಬ್ರಾಹ್ಮಣರು. ದೇವಸ್ಥಾನದ ವೈದಿಕ ಕಾರ್ಯಗಳಲ್ಲಿ ಸ್ಥಾನಿಕ ಬ್ರಾಹ್ಮಣರು ಇದ್ದರೆ ಕಾರ್ಯಗಳು ಪೂರ್ಣತೆಯಾಗಿದೆ ಎಂದರ್ಥ. ಸ್ಥಾನಿಕ ಬ್ರಾಹ್ಮಣರು ದೇವರ ಜೊತೆ ಬಹಳ ಹತ್ತಿರವಾಗಿರುವವರು. ಎಲ್ಲ ರಂಗಗಳಲ್ಲಿ ಪರಿಪೂರ್ಣತೆ ಪಡೆದು ಶ್ರೇಷ್ಠ ಗುಣಗೌರವ ಸಮೃದ್ಧಿ ಪಡೆದ ಸಮುದಾಯ ಸ್ಥಾನಿಕ ಬ್ರಾಹ್ಮಣ ವರ್ಗಕ್ಕೆ ಸಲ್ಲುತ್ತದೆ ಎಂದರು. ದೇವರ ಕಾರ್ಯ, ಉತ್ಸವ ಆಚರಣೆ ಶಾಸ್ತ್ರಬದ್ಧವಾಗಿರಲು ಪ್ರಮುಖ ಕಾರಣ ಸ್ಥಾನಿಕ ಬ್ರಾಹ್ಮಣ ಸಮಾಜದ ವೃತ್ತಿ ಗೌರವ. ಪ್ರತಿಯೊಬ್ಬರಲ್ಲೂ ಪರಿಶ್ರಮ, ಏಕಾಗ್ರತೆ, ತನ್ಮಯತೆ ಇದ್ದಾಗ ಪರಿಪೂರ್ಣ ಬದುಕು ಸಾಧ್ಯ. ಪ್ರತಿಯೊಬ್ಬರು ಸಮಾಜದ ಜೊತೆಯಿರಬೇಕು ಮತ್ತು ವಿಶ್ವ ಶಾಂತಿಗಾಗಿ ಪ್ರಾರ್ಥಿಸಿ ತಮ್ಮ ಗೌರವ ಹೆಚ್ಚಿಸಿಕೊಳ್ಳಬೇಕು. ನಮ್ಮ ಗುರಿ ಸುಖ, ಶಾಂತಿ, ಸಂತೋಷ, ನೆಮ್ಮದಿ, ತೃಪ್ತಿಯಿಂದಿರಲು ಒಳ್ಳೆಯ ಸಂಸ್ಕಾರ, ಬ್ರಾಹ್ಮಣ್ಯದ ಗುಣಗೌರವಗಳನ್ನು ಅನೂಚಾನವಾಗಿ ಉಳಿಸಿಕೊಂಡು, ಮಕ್ಕಳಿಗೆ ಪ್ರೇರೇಪಿಸಿ ಸ್ಥಾನಿಕ ಸಮಾಜ ಉಳಿದ ಸಮಾಜಕ್ಕೆ ಪ್ರೇರಣೆಯಾಗಲಿ ಎಂದು ಅವರು ಹೇಳಿದರು.

ಮುಖ್ಯ ಅಭ್ಯಾಗತರಾಗಿದ್ದ ವಿಧಾನ ಪರಿಷತ್ ಸದಸ್ಯ ಪ್ರತಾಪ್‌ಸಿಂಹ ನಾಯಕ್ ಅವರು ಸಮಾಜಕ್ಕೆ ಶಕ್ತಿ ಕೊಡಬಲ್ಲ ನಮ್ಮದಾದ ಸೇವೆಯನ್ನು ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಕೊಡುಗೆಯಾಗಿ ನೀಡೋಣ ಎಂದರು. ಕರ್ನಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್ ಪಂಜ, ಸ್ಥಾನಿಕ ಬ್ರಾಹ್ಮಣ ಸಮಾವೇಶದ ಗೌರವಾಧ್ಯಕ್ಷ ಎನ್.ಕೆ. ಜಗನ್ನಿವಾಸ ರಾವ್ ಪುತ್ತೂರು, ಕಾರ್ಯಾಧ್ಯಕ್ಷ ಪಿ. ರಾಧಾಕೃಷ್ಣ ರಾವ್ ಧರ್ಮಸ್ಥಳ, ಗೌರವ ಸಲಹೆಗಾರ ಎಂ.ಎಸ್. ಅರುಣ್ ಕುಮಾರ್ ಉಜಿರೆ, ಪ್ರಧಾನ ಕಾರ್ಯದರ್ಶಿ ಬಿ.ಕೆ. ಧನಂಜಯ ರಾವ್ ಬೆಳ್ತಂಗಡಿ, ಉಪಾಧ್ಯಕ್ಷೆ ಶಾಂತಾ ಸುರೇಶ್ ರಾವ್, ಯುವ ವೇದಿಕೆ ಅಧ್ಯಕ್ಷ ಪವನ್ ರಾವ್ ಚಾರ್ಮಾಡಿ, ಮಹಿಳಾ ವೇದಿಕೆ ಅಧ್ಯಕ್ಷೆ ಮಮತಾ ಹರೀಶ್ ರಾವ್ ಧರ್ಮಸ್ಥಳ, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸಂಚಾಲಕ ಉದಯ ಕುಮಾರ್ ರಾವ್ ಮಂಗಳೂರು ಮೊದಲಾದವರು ಉಪಸ್ಥಿತರಿದ್ದರು. ಮಂಗಳೂರಿನ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷ ಎಂ. ದೇವಾನಂದ ಭಟ್ ಅಧ್ಯಕ್ಷತೆ ವಹಿಸಿ, ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಸಹ ಕಾರ್ಯದರ್ಶಿ ನಿಟ್ಟೆ ಕೆ. ಮುರಲೀಧರ ಶರ್ಮ ವರದಿ ಮಂಡಿಸಿದರು. ಮಹಾಮಂಡಲದ ಉಪಾಧ್ಯಕ್ಷ ಉದಯ ಬಾರಕೂರು ವಂದಿಸಿದರು. ನಾಗರಾಜ್ ವರ್ಕಾಡಿ ಮತ್ತು ಸವಿತಾ ಎರ್ಮಾಳು ಕಾರ್ಯಕ್ರಮ ನಿರೂಪಿಸಿದರು. ಸ್ಥಾನಿಕ ಬ್ರಾಹಣ ಮಹಾಮಂಡಲದ ವ್ಯಾಪ್ತಿಯ 18 ಸಭಾದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

**ಹಿರಿಯ ಸಾಧಕರಿಗೆ ಸನ್ಮಾನ :** ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಮಾಜದ ಹಿರಿಯ ಸಾಧಕರಾದ ಮಂಗಳೂರಿನ ಯು. ಕೆ. ಪ್ರವೀಣ್ (ಕಲಾಕ್ಷೇತ್ರ), ಪುತ್ತೂರಿನ ಡಾ. ಶ್ರೀಕಾಂತ್ ರಾವ್ (ವೈದ್ಯಕೀಯ), ಮೂಡುಬಿದಿರೆಯ ರತ್ನಾಕರ ರಾವ್ (ಗುಡಿಕೈಗಾರಿಕೆ), ಮೈಸೂರಿನ ತೋಟಾಲು ಮೋಹನ್ ರಾವ್ (ಸಮಾಜಸೇವೆ), ಉಡುಪಿಯ ಡಾ। ಪಿ.ಜಿ. ರಾವ್ (ವೈದ್ಯಕೀಯ), ಕಾಸರಗೋಡಿನ ಡಾ।ಕೆ.ಕೆ. ಶಾನುಭೋಗ್ (ಸ್ಥಾನಿಕ ಸಮಾಜಸೇವೆ), ಕಾರ್ಕಳದ ಕೆ.ಎಸ್. ಕೇಶವ ರಾವ್ (ಸಮಾಜಸೇವೆ) ಸುಳ್ಯದ ಡಾ। ಸದಾಶಿವ ರಾವ್ (ಸ್ಥಾನಿಕ ಸಂಘಟನೆ), ಪಡುಬಿದ್ರೆಯ ಶರಾವತಿ ರವಿರಾಜ್ ರಾವ್ (ಕೃಷಿ), ಕುಂದಾಪುರದ ನಾಗರತ್ನ ಹೆಬ್ಬಾರ್ (ಸಾಹಿತ್ಯ), ಸುರತ್ಕಲ್‌ನ ರತ್ನಾಕರ ರಾವ್ (ಶೈಕ್ಷಣಿಕ), ಬೆಳ್ತಂಗಡಿಯ ಬಿ.ಕೆ. ಧನಂಜಯ ರಾವ್ (ಕಾನೂನು ಸೇವೆ), ಬ್ರಹ್ಮಾವರದ ಶಿವಾನಂದ ಕೋಟ (ಯಕ್ಷಗಾನ), ಕಬ್ಬಿನಾಲೆಯ ಶಂಕರನಾರಾಯಣ ಹೆಬ್ಬಾರ್ (ವೈದಿಕ), ಸೌಕೂರಿನ ಮಂಜುನಾಥಯ್ಯ (ಜ್ಯೋತಿಷ್ಯ), ರಾಮಕುಂಜದ ಭಾಗ್ಯಚಂದ್ರ ರಾವ್ (ಜ್ಯೋತಿಷ್ಯ), ಬಂಟ್ವಾಳದ ನಂದಾವರ ಲಕ್ಷ್ಮೀ ಅಮ್ಮ (ಶೈಕ್ಷಣಿಕ), ಮುಂಬೈಯ ಉಮೇಶ್ ಪಂಜ (ಸಂಘಟನೆ) ಮೊದಲಾದವರನ್ನು ಗಣ್ಯ ಅತಿಥಿಗಳನ್ನು ಸಮ್ಮಾನಿಸಿ ಗೌರವಿಸಿದರು.





*With Best Complimemts From*

SRI M. SHAILESH RAO B.E., Civil    Ph : 9448624324

Civil Engineer & Contractor

SRI MALAVIKA ASSOCIATES

KALSANKA-UDUPI ROAD, UDUPI.

Website : shreemaalavikaassociates.com


## ಶ್ರೀ ಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರ ರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕೆ ಕೃಷ್ಣ ರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

# ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಕೃಷ್ಣಶಿಲಾ ಬಿಂಬ ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ

■...1ನೇ ಪುಟದಿಂದ

**ಶ್ರೀ ಶ್ರೀಗಳಿಂದ ಸಭಾ ದರ್ಬಾರು :**

ದಿನಾಂಕ 03-03-2023ರಂದು ಪ್ರತಿಷ್ಠಾ–ಕುಂಭಾಭಿಷೇಕದ ನಂತರ ಶ್ರೀ ಶ್ರೀಗಳ ದರ್ಬಾರು ಸಭೆ ನೆರವೇರಿತು. ಈ ಸಭೆಯಲ್ಲಿ ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲೆಗಳ ವ್ಯಾಪ್ತಿಯ ಶೃಂಗೇರಿ ಭಜನಾಮಂಡಳಿಗಳಿಂದ ಭಜನಾ ಸಮರ್ಪಣಾ ಕಾರ್ಯಕ್ರಮ ನೆರವೇರಿತು. ನಂತರ ವೇದಘೋಷದೊಂದಿಗೆ ಸಭೆ ಪ್ರಾರಂಭಗೊಂಡಿತು. ಶ್ರೀಮತಿ ರಮ್ಯಾ ಲೋಕೇಶ್ ಇವರಿಂದ ದೇವತಾ ಪ್ರಾರ್ಥನೆಯ ಬಳಿಕ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿಯವರು ಶ್ರೀ ಶ್ರೀಗಳನ್ನು ಮತ್ತು ನೆರೆದಿರುವ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ದಂಪತಿಗಳು ಜಗದ್ಗುರುಗಳವರಿಗೆ ಫಲ, ಪುಷ್ಪ, ಕಾಣಿಕೆಯನ್ನು ಅರ್ಪಿಸಿದರು. ಹಾಗೆಯೇ ವಿವಿಧ ಸಂಘಗಳು ಮತ್ತು ಗಣ್ಯ ವ್ಯಕ್ತಿಗಳಿಂದ ಫಲ ಪುಷ್ಪ ಸಮರ್ಪಣೆ ನೆರವೇರಿತು. ಸಂಘದ ಉಪಾಧ್ಯಕ್ಷ ಶ್ರೀ ಅರವಿಂದಕುಮಾರ್ ಧನ್ಯವಾದ ಸಮರ್ಪಣೆ ಮಾಡಿದರು. ನೆರೆದಿದ್ದ ಸಾವಿರಾರು ಜನರಿಗೆ ಶ್ರೀ ಶ್ರೀಗಳಿಂದ ಆಶೀರ್ವಚನ ನುಡಿಗಳ ನಂತರ ಸಭೆ ಮುಕ್ತಾಯಗೊಂಡಿತು. ಸಭಾ ನಿರ್ವಹಣೆಯನ್ನು ಸಂಘದ ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಮಾಡಿದ್ದರು.

**ನೂತನ ಬಿಂಬದ ಮೆರವಣಿಗೆ :**

ನೂತನ ಬಿಂಬದ ತಯಾರಿಗೆ ಸುಮಾರು 3 ತಿಂಗಳ ಹಿಂದೆಯೇ ಆಗಮ ಶಾಸ್ತ್ರದಂತೆ ಪೆರ್ಡೂರಿನ ಶಿಲ್ಪಿ ಸುಧೀರ್ ಆಚಾರ್ಯ ಇವರಿಗೆ ಜವಾಬ್ದಾರಿ ಒಪ್ಪಿಸಲಾಯಿತು. ಅದರಂತೆ ಫೆಬ್ರವರಿ 25ರ ಮೊದಲೇ ನೂತನ ಶಿಲ್ಪದ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿತು. ಮೂರ್ತಿಯನ್ನು ಶ್ರೀ ಶಾರದಾ ಮಂದಿರಕ್ಕೆ ಸಾಗಿಸುವ ಜವಾಬ್ದಾರಿಯುತ ಕೆಲಸವನ್ನು ದಿನಾಂಕ 25.02.23ರಂದು ಕೈಗೆತ್ತಿಕೊಂಡು ಯಶಸ್ವಿಯಾಗಿ ಮಾಡಲಾಯಿತು. ಫೆಬ್ರವರಿ 26ರ ಸಂಜೆ 5.15ಕ್ಕೆ ಸರಿಯಾಗಿ ಕುಂಜಿಬೆಟ್ಟು ಮುಖ್ಯರಸ್ತೆಯ ಎಂಜಿಎಂ ಕಾಲೇಜಿನ ಸರ್ಕಲ್ ಬಳಿ ಭಕ್ತಬಾಂಧವರೆಲ್ಲರೂ ಜೊತೆ ಸೇರಿ ಅಲಂಕೃತ ಟ್ಯಾಬ್ಲೋದಲ್ಲಿ ಜೋಡಿಸಲ್ಪಟ್ಟ ನೂತನ ಬಿಂಬವನ್ನು ಸ್ವಾಗತಿಸಿ ಮೆರವಣಿಗೆ ಮೂಲಕ ಶ್ರೀ ಶಾರದಾ ಮಂದಿರಕ್ಕೆ ಕರೆತರಲಾಯಿತು. ಮಂಗಳವಾದ್ಯ, ಭಜನಾ ತಂಡಗಳು, ಚೆಂಡೆವಾದನ ಮೊದಲಾದುವುಗಳೊಂದಿಗೆ ಸುಮಾರು 350ಕ್ಕಿಂತಲೂ ಹೆಚ್ಚು ಭಕ್ತ ಬಾಂಧವರು ಈ ಮೆರವಣಿಗೆಯಲ್ಲಿ ಪಾಲ್ಗೊಂಡರು.

**ಯಾಂತ್ರೀಕೃತ ಯುಗ– ಕ್ರೇನ್ ಬಳಕೆ :**

ದೇವಸ್ಥಾನ ಗುಡಿ ಗೋಪುರ ನಿರ್ಮಾಣ, ಶಿಲ್ಪ ಕಲಾ ಕಂಭಗಳು, ಶಿಲ್ಪಕಲಾ ಫಲಕಗಳು, ದೇವರ ವಿಗ್ರಹ ಪ್ರತಿಷ್ಠೆ ಮೊದಲಾದ ಕೆಲಸ ಕಾರ್ಯಗಳಿಗೆ ಹಿಂದಿನ ಕಾಲದಲ್ಲಿ ಯಾವುದೇ ಯಂತ್ರಗಳು ಇಲ್ಲದ ಸಂದರ್ಭದಲ್ಲಿ ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಜೋಡಣೆ ಮಾಡಿದ್ದು, ಅದು ಇಂದಿಗೂ ಯಾವ ಲೋಪವೂ ಇಲ್ಲದಂತೆ ಭದ್ರವಾಗಿ ಸುಂದರವಾಗಿ ನೆಲೆಯಾಗಿರುವುದನ್ನು ನೋಟಕರ ಕಣ್ಣುಗಳು ಇಂದಿಗೂ ಆಶ್ಚರ್ಯಚಕಿತವಾಗಿ ನೋಡುತ್ತಿವೆ. ಅಂತಿರುವಾಗ ಮಾನವನು ಬುದ್ಧಿಮತ್ತೆ ಮತ್ತು ಕೌಶಲಗಳ ಬಳಕೆಯಿಂದ ವೈಜ್ಞಾನಿಕ ಹಾಗೂ ಯಾಂತ್ರಿಕ ಬದುಕಿನಲ್ಲಿ ತನಗೆ ಬೇಕಾದ ಸಲಕರಣೆಗಳನ್ನು ಉಪಯೋಗಿಸಿಕೊಂಡು ಅಂತಹ ಕಠಿಣ ಕಾರ್ಯಗಳನ್ನು ಸುಲಭಗೊಳಿಸುವಲ್ಲಿ ಸಫಲತೆ ಹೊಂದಿರುತ್ತಾನೆ. ಇಲ್ಲಿ ಶ್ರೀ ಶಾರದಾ ಮಾತೆಯ ಪ್ರತಿಷ್ಠಾಪನೆಯ ಸಂದರ್ಭದಲ್ಲಿಯೂ ಕ್ರೇನ್ ಬಳಕೆ ಮಾಡಲಾಗಿದೆ. ಸಾಗಾಟಕ್ಕೆ, ಲೋರಿಗಳಿಗೆ ಲೋಡ್ ಮಾಡುವುದು, ಅನ್ಲೋಡ್ ಮಾಡುವುದು, ಹಳೆಯ ಪೀಠ ಹಾಗೂ ಹೊಸ ಪೀಠಗಳನ್ನು ಸ್ಥಳಾಂತರಿಸಲು ಕ್ರೇನ್ ಬಳಕೆ ಮಾಡಿದ್ದರಿಂದ ಕೆಲಸ ಸುಲಭವಾಯಿತು. ಹೀಗೆ ನಾವು ನಮ್ಮ ಪೂರ್ವಜರ ಶ್ರಮದ ಕಾಯಕಗಳನ್ನು ನೆನೆದು ಹುಬ್ಬೇರಿಸುವಂತಾಯಿತು.

**ನೂತನ ಪ್ರತಿಮೆಯ ಬಗ್ಗೆ ಸಂಕಲ್ಪ :**

ಶ್ರೀ ಶಾರದಾ ಮಾತೆಯ ವಿಗ್ರಹ ಯಾಕೆ ಬದಲಾಯಸಬೇಕೆಂಬ ಪ್ರಶ್ನೆ ಹತ್ತು ಹಲವರ ಮನದಲ್ಲಿತ್ತು. 35 ವರ್ಷಗಳ ಹಿಂದೆ ಪ್ರತಿಷ್ಠಾಪಿಸಲ್ಪಟ್ಟ ಈ ಅಮೃತಶಿಲಾ ವಿಗ್ರಹದಲ್ಲಿ ಭಿನ್ನತೆ ಗೋಚರಿಸಿದ್ದು, ಕಳೆದ 6 ತಿಂಗಳಿಂದ ಸಂಘದ ಆಡಳಿತ ಮಂಡಳಿಯು ಈ ಬಗ್ಗೆ ಚಿಂತನ ನಡೆಸುತ್ತಿತ್ತು. ನಮ್ಮ ಸಂಘದ ವೈದಿಕ ಸಲಹೆಗಾರರೂ ಆದ ವೇದಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರುದ್ವಯರನ್ನು ಬೇಟಿಮಾಡಿ ಹಲವು ಬಾರಿ ಸಮಾಲೋಚನೆ ಮಾಡಲಾಗಿತ್ತು. ಹಾಗೆಯೇ ಶ್ರೀ ಶ್ರೀ ಭಾರತೀ ತೀರ್ಥ ಸನ್ನಿಧಾನಂಗಳವರ ಸಲಹೆಯಂತೆ ನೂತನ ಕೃಷ್ಣಶಿಲಾ ಶಾರದೆಯ ವಿಗ್ರಹದ ಪ್ರತಿಷ್ಠಾಪನೆಗೆ ನಿರ್ಣಯ ಕೈಗೊಳ್ಳಲಾಯಿತು. ಪೆರ್ಡೂರಿನ ಶಿಲ್ಪಿ ಸುಧೀರ್ ಆಚಾರ್ಯರಲ್ಲಿ ಕಳೆದ ನವೆಂಬರ್ ತಿಂಗಳಲ್ಲಿ ಮಾತುಕಥೆ ಮಾಡಿ ಶಿಲ್ಪದ ನಿರ್ಮಾಣಕ್ಕೆ ಸಂಕಲ್ಪಿಸಲಾಯಿತು. ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ತಾವೇ ಆಗಮಿಸಿ ಪ್ರತಿಷ್ಠಾಪನೆಗೈಯುವುದಾಗಿ ಹೇಳಿರುವಂತೆ ಮಾರ್ಚ್ 03ರಂದು ಪ್ರಾಥ:ಕಾಲ ಶ್ರೀ ಶಾರದಾಂಬೆಯ ಬಿಂಬ ಪ್ರತಿಷ್ಠೆ ಹಾಗೂ ಕುಂಭಾಭಿಷೇಕವು ನೆರವೇರಿತು.

**ಧಾರ್ಮಿಕ ವಿಧಿಗಳು :**

ದಿನಾಂಕ 26.02.2023ರಂದು ಸಂಜೆ 6.00ಕ್ಕೆ ಆಗಮಿಸಿದ ನೂತನ ಬಿಂಬವನ್ನು ಎಂಜಿಎಂ ಕಾಲೇಜಿನ ಬಳಿ ಸರ್ಕಲ್‌ನಲ್ಲಿ ಸ್ವಾಗತಿಸಿ ಮೆರವಣಿಗೆ ಮೂಲಕ ಶ್ರೀ ಶಾರದಾ ಮಂಟಪ ಸಂಕೀರ್ಣಕ್ಕೆ ಕರೆತರಲಾಯಿತು. 27ರ ಸಂಜೆ ನೂತನ ಬಿಂಬ ಪರಿಗ್ರಹ, ಜಲಾಧಿವಾಸ ವಿಧಿಗಳು ನೆರವೇರಿತು. ವಿಗ್ರಹವನ್ನು ಕಲಶಾಭಿಷೇಕದ ಮೂಲಕ ಶುಚಿಗೊಳಿಸಿ ಕೃತಕ ನೀರಿನ ಟ್ಯಾಂಕ್ ರಚಿಸಿ ಜಲಾಧಿವಾಸಕ್ಕೆ ಸಿದ್ಧಗೊಳಿಸಲಾಯಿತು. ತಾರೀಕು 28ರಂದು ಶ್ರೀ ಶಾರದೆಗೆ ಪಂಚವಿಂಶತಿ ಕಲಶಾಭಿಷೇಕದೊಂದಿಗೆ ಅನುಜ್ಞಾ ಕಲಶಹೋಮ ಪುರಸ್ಸರವಾಗಿ ಕಲಾ ಸಂಕೋಚ, ಬಿಂಬ–ಪೀಠಗಳ ಉದ್ಧಾರ ಮಾಡಲಾಯಿತು. ಶ್ರೀ ದೇವಿಯ ಸಾನಿಧ್ಯವನ್ನು ಬಾಲಾಲಯದಲ್ಲಿ ಸಂಪನ್ನಗೊಳಿಸಲಾಯಿತು.

ಮಾರ್ಚ್01ರಂದು ಬೆಳಿಗ್ಗೆ ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸಂಜೆ ಪ್ರಾಸಾದ ಶುದ್ಧಿ, ರಾಕ್ಷೋಘ್ನಹೋಮ, ವಾಸ್ತು ವಿಧಿಗಳನ್ನು ನೆರವೇರಿಸಲಾಯಿತು. ಮಾರ್ಚ್2ರಂದು ನೂತನ ಬಿಂಬ ಶುದ್ಧಿ, ಪೀಠ ಶುದ್ಧಿ, ಪ್ರತಿಷ್ಠಾಧಿವಾಸಾದಿ ಕರ್ಮಗಳು, ಸಾಯಂಕಾಲ 108 ಕಲಶ ಸ್ಥಾಪನೆ, ಅಧಿವಾಸ ಹೋಮ ನೆರವೇರಿತು. ಮಾರ್ಚ್03ರ ಪ್ರಾಥ:ಕಾಲದಲ್ಲಿ 8.00 ಘಂಟೆಗೆ ಮೀನಲಗ್ನ ಸುಮುಹೂರ್ತದಲ್ಲಿ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಂದ ಶ್ರೀ ಶಾರದಾಂಬೆಯ ನೂತನ ಬಿಂಬ ಪ್ರತಿಷ್ಠೆ– ಬ್ರಹ್ಮಕುಂಭಾಭಿಷೇಕ, ಮಹಾಪೂಜೆ ನೆರವೇರಿತು.

ಈ ಎಲ್ಲಾ ಧಾರ್ಮಿಕ ವಿಧಿಗಳನ್ನು ನಮ್ಮ ಸಮಾಜದ ಹಿರಿಯ ತಂತ್ರಿಗಳೂ, ಶ್ರೀ ಕ್ಷೇತ್ರ ಶೃಂಗೇರಿಯ ಉಡುಪಿ ಪ್ರಾಂತದ ಧರ್ಮಾಧಿಕಾರಿಗಳೂ, ನಮ್ಮ ಉಡುಪಿಯ ಸ್ಥಾನಿಕ ಬ್ರಾಹಣ ಸಂಘದ ವೈದಿಕ ಸಲಹೆಗಾರರೂ ಆಗಿರುವ ವೇದಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳವರ ಮಾರ್ಗದರ್ಶನದಲ್ಲಿ ನಮ್ಮ ಸಮಾಜದ ಹತ್ತು ಹಲವು ಋತ್ವಿಜರ ಮೂಲಕ ನೆರವೇರಿಸಲಾಯಿತು.

**ಸೇವೆಗಳು ಮತ್ತು ಭಕ್ತರ ಭಾಗವಹಿಸುವಿಕೆ :**

ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ ಸಮಾರಂಭಕ್ಕಾಗಿಯೇ ವಿಶೇಷ ಸೇವೆಗಳನ್ನು ನಿರ್ಧರಿಸಲಾಗಿದ್ದು, ಕುಂಕುಮಾರ್ಚನೆ, ಅನ್ನದಾನ ಸೇವೆ, ಮಹಾಪೂಜೆ ಸೇವೆ, ಕಲಶ ಸೇವೆ, ಸರ್ವಸೇವೆ ಎಂದು ಹಲವು ವಿಧದ ಕೂಪನ್‌ಗಳನ್ನು ಮಾಡಲಾಗಿದ್ದು, ಭಕ್ತಬಾಂಧವರು ತಮ್ಮ ಶಕ್ತ್ಯಾನುಸಾರ ಸೇವೆಗಳ ಕೂಪನ್‌ಗಳನ್ನು ಪಡೆದುಕೊಂಡು ಶ್ರೀ ದೇವಿಯ ಸೇವೆಗೈದರು. ಇದಲ್ಲದೆ ವಸ್ತು ರೂಪದಲ್ಲಿಯೂ ಹಲವರು ತಮ್ಮ ಶಕ್ತ್ಯಾನುಸಾರ ದೇಣಿಗೆಯನ್ನು ನೀಡಿದರು. ಅಕ್ಕಿ, ಎಣ್ಣೆ, ತುಪ್ಪ, ಬೆಲ್ಲ, ಸಕ್ಕರೆ, ತರಕಾರಿ, ಬಾಳೆಎಲೆ, ಬಾಳೆಹಣ್ಣು, ಸಿಹಿಭಕ್ಷ್ಯಗಳು, ತೆಂಗಿನಕಾಯಿ, ಹಾಲುಪಾಯಸ ಮೊದಲಾದವುಗಳು ಸೇವಾರೂಪದಲ್ಲಿ ಬಂದಿದ್ದು ಈ ರೀತಿಯಿಂದಲೂ ಶ್ರೀ ಶಾರದಾ ಮಾತೆಯ ಕೃಪೆಗೆ ಪಾತ್ರರಾದರು.

**ಜಗದ್ಗುರುಗಳ ಉಡುಪಿ ದಿಗ್ವಿಜಯ–2023 :**

ಶ್ರೀಮಜ್ಜಗದ್ಗುರು ಶ್ರೀಕ್ಷೇತ್ರ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ಉಡುಪಿಗೆ ತಮ್ಮ 2ನೇ ದಿಗ್ವಿಜಯ ಯಾತ್ರೆಯನ್ನು ಕೈಗೊಂಡಿದ್ದಾರೆ. ದಿನಾಂಕ 02.03.2023ರಂದು ಗುರುವಾರ ಮಧ್ಯಾಹ್ನ ಶ್ರೀ ಕ್ಷೇತ್ರ ಶೃಂಗೇರಿಯಿಂದ ಹೊರಟು ಸಂಜೆ 6.15ಕ್ಕೆ ಎಂಜಿಎಂ ಕಾಲೇಜಿನ ಬಳಿ ಬಂದಾಗ ಭವ್ಯಮೆರವಣಿಗೆ ಮೂಲಕ ಶ್ರೀ ಶಾರದಾ ಮಂಟಪಕ್ಕೆ ಬರಮಾಡಿಕೊಳ್ಳಲಾಯಿತು. ಶ್ರೀ ಶಾರದಾ ಮಂಟಪದಲ್ಲಿ ವೇದಘೋಷದೊಂದಿಗೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಪೂರ್ಣಕುಂಭ ಸ್ವಾಗತ ಮಾಡಿದರು. ಬಳಿಕ ಶ್ರೀ ಶಾರದಾ ಮಂಟಪದಲ್ಲಿ ವಿರಾಜಮಾನರಾದ ಶ್ರೀ ಶ್ರೀಗಳಿಗೆ ಧೂಳೀಪಾದಪೂಜೆಯನ್ನು ಸಂಘದ ಕೋಶಾಧಿಕಾರಿ ಶ್ರೀ ಗಣೇಶ್ ಹೆಬ್ಬಾರ್ ದಂಪತಿಗಳು ನೆರವೇರಿಸಿದರು. ನಂತರ ರಾತ್ರಿ ಶ್ರೀ ಶಾರದಾ, ಚಂದ್ರಮೌಳೀಶ್ವರರ ಭವ್ಯ ಪೂಜೆ ಸಂಪನ್ನಗೊಂಡಿತು.

ದಿನಾಂಕ 03.03.2023ರಂದು ಬೆಳಿಗ್ಗೆ ಪ್ರತಿಷ್ಠೆ– ಕುಂಭಾಭಿಷೇಕ ನೆರವೇರಿಸಿದರು. ನಂತರ ಭಕ್ತಬಾಂಧವರಿಂದ ಪಾದಪೂಜೆ. ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಶೃಂಗೇರಿ ಭಜನಾ ಮಂಡಳಿಗಳಿಂದ ಭಜನಾ ಸಮರ್ಪಣಾ ಕಾರ್ಯಕ್ರಮ ನೆರವೇರಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಶ್ರೀಗಳು ಭಕ್ತವೃಂದವನ್ನುದ್ದೇಶಿಸಿ ಆಶೀರ್ವಚನ ನೀಡಿದರು.

ಅಂದು ಸಂಜೆ 4.30ಕ್ಕೆ ಉಡುಪಿ ಕಡಿಯಾಳಿಯ ಮಹಿಷಮರ್ಧಿನೀ ದೇವಸ್ಥಾನಕ್ಕೆ ಅಲ್ಲಿನ ಆಡಳಿತ ಮಂಡಳಿಯ ವಿನಂತಿಯಂತೆ ಆಗಮಿಸಿದರು. ಶ್ರೀ ದೇವಿ ದರ್ಶನದ ಬಳಿಕ ಅಲ್ಲಿ ಸಾರ್ವಜನಿಕ ಗೌರವವನ್ನು ಸ್ವೀಕರಿಸಿದರು. ನೆರೆದಿದ್ದ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿದರು.

04.03.2023ರ ಬೆಳಿಗ್ಗೆ ಬೇರೆಬೇರೆ ಸಮುದಾಯದವರಿಂದ ಗುರುಗಳಿಗೆ ಫಲ ಪುಷ್ಪ ಸಮರ್ಪಣಾ ಕಾರ್ಯ ನಡೆಯಿತು. ಹಾಗೆಯೇ ಪಾದಪೂಜಾ ವಿಧಿಗಳು ನೆರವೇರಿತು. ಬೆಳಿಗ್ಗೆ 10 ಗಂಟೆಗೆ ಪ್ರಸ್ತಾವಿತ ಶೃಂಗೇರಿ ಮಠದ ಸ್ಥಾಪನೆಗಾಗಿ ನೋಡಲಾದ ನಾಲ್ಕು ಎಕರೆ ಸ್ಥಳದ ಪರಿವೀಕ್ಷಣೆಯನ್ನು ಮಾಡಲು ಉಡುಪಿ ಸಂತೆಕಟ್ಟೆಯ ಸಮೀಪದ ಲಕ್ಷ್ಮೀನಗರಕ್ಕೆ ಶೃಂಗೇರಿ ಶ್ರೀಗಳು ಭೇಟಿಕೊಟ್ಟು ಸಂತೋಷ ವ್ಯಕ್ತಪಡಿಸಿದರು.

ನಂತರ ಸಾಲಿಕೇರಿಯ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಶ್ರೀ ಶ್ರೀಗಳನ್ನು ಅದ್ದೂರಿಯಾಗಿ ಸ್ವಾಗತಿಸಿ ಪಾದಪೂಜೆ ಗುರುವಂದನೆ ಸಲ್ಲಿಸಲಾಯಿತು. ಪ್ರಥಮ ಬಾರಿಗೆ ಈ ದೇವಸ್ಥಾನಕ್ಕೆ ಬೇಟಿ ನೀಡಿದ ಶ್ರೀ ಶ್ರೀಗಳು ನೆರೆದಿದ್ದ ಭಕ್ತವೃಂದಕ್ಕೆ ಅನುಗ್ರಹ ಭಾಷಣ ಮಾಡಿದರು.

ಶ್ರೀ ಶಾರದಾ ಮಂಟಪಕ್ಕೆ ಹಿಂದಿರುಗಿದ ಜಗದ್ಗುರುಗಳು ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಎಲ್ಲಾ ನಿರ್ದೇಶಕರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಮಧ್ಯಾಹ್ನ ಗಂಟೆ 3ಕ್ಕೆ ಶಿವಪಾಡಿ ಶ್ರೀ ಉಮಾಮಹೇಶ್ವರ ದೇಗುಲದತ್ತ ಪ್ರಯಾಣ ಪ್ರಾರಂಭಿಸಿದರು. ಮಣಿಪಾಲದಲ್ಲಿ ಭವ್ಯ ಸ್ವಾಗತದೊಂದಿಗೆ ಐತಿಹಾಸಿಕ ಮೆರವಣಿಗೆಯೊಂದಿಗೆ ಶ್ರೀ ದೇವಳಕ್ಕೆ ಆಗಮಿಸಿದರು. ಅಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀ ಶ್ರೀಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ನೆರೆದ ಸಾವಿರಾರು ಭಕ್ತರನ್ನುದ್ದೇಶಿಸಿ ಅನುಗ್ರಹ ಮಾತುಗಳನ್ನಾಡಿದರು. ಮರುದಿನ ಬೆಳಿಗ್ಗೆ ಶ್ರೀ ಶ್ರೀಗಳು ಕಳೆದ ಹನ್ನೆರಡು ದಿನಗಳಿಂದ ಸತತ ನೆರವೇರುತ್ತಿರುವ ಅತಿರುದ್ರ ಮಹಾಯಾಗದ ಪೂರ್ಣಾಹುತಿಯನ್ನು ನೆರವೇರಿಸಿದರು. ಅಂದು ಸಂಜೆ ಜಗದ್ಗುರುಗಳನ್ನು ಅವರ ಪರಿವಾರದೊಂದಿಗೆ ಬೆಳಂಗಡಿಯಲ್ಲಿ ನಡೆಯುವ ವಿಶ್ವ ಸ್ಥಾನಿಕ ಸಮಾವೇಶಕ್ಕಾಗಿ ಬೀಳ್ಕೊಡಲಾಯಿತು.

**ಊಟೋಪಚಾರ :**

ತಾ.26.02.2023ರಂದು ಮೂರ್ತಿಯ ಮೆರವಣಿಗೆ ಬಂದ ಸಂದರ್ಭ ಪ್ರಾರಂಭಗೊಂಡ ಉಪಹಾರದ ವ್ಯವಸ್ಥೆಯು ಪ್ರತಿದಿನ ಬೆಳಿಗ್ಗೆ ಉಪಹಾರ ಹಾಗೂ ಮಧ್ಯಾಹ್ನ ಭೋಜನ, ಮತ್ತು ಸಂಜೆ ಉಪಹಾರ ಹಾಗೂ ರಾತ್ರಿ ಭೋಜನ ಶ್ರೀ ಶಾರದಾ ಮಂಟಪದಲ್ಲಿ ನಿರಂತರ ಮಾಡಲಾಗಿತ್ತು. ಮೊದಲ ಕೆಲವು ದಿನಗಳಲ್ಲಿ 50–60 ಜನಗಳಷ್ಟು ಜನ ಇದ್ದರೂ ನಂತರದ ದಿನಗಳಲ್ಲಿ ಸ್ವಯಂಸೇವಕರ ಸಂಖ್ಯೆ ಹೆಚ್ಚುತ್ತಾ ಇದ್ದು, ಎಲ್ಲಿಯೂ ಕಡಿಮೆಯಾಗದಂತೆ ಊಟೋಪಚಾರದ ವ್ಯವಸ್ಥೆ ನೆರವೇರುತ್ತಿತ್ತು. ತಾ.03.03.2023ರ ಪ್ರತಿಷ್ಠಾ ಬ್ರಹ್ಮಕುಂಭಾಭಿಷೇಕದ ದಿನ ಸುಮಾರು 2800ಕ್ಕಿಂತಲೂ ಹೆಚ್ಚು ಭಕ್ತಬಾಂಧವರು ಭೋಜನ ಪ್ರಸಾದ ಸ್ವೀಕರಿಸಿದರು.

**ಕೃತಜ್ಞತಾರ್ಪಣೆ :**

ಶ್ರೀ ಶಾರದಾ ದೇವಸ್ಥಾನ ಕುಂಜಿಬೆಟ್ಟು ಉಡುಪಿ ಇಲ್ಲಿ ನೆರವೇರಿದ ಪುನ:ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕದ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ನೀಡಿದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥಸನ್ನಿಧಾನಂಗಳವರಿಗೆ, ಹಾಗೂ ಉಡುಪಿಗೆ ಆಗಮಿಸಿ ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ ಕೈಗೊಂಡು ಭಕ್ತ ಬಾಂಧವರಿಗೆ ಆಶೀರ್ವಚನ ನೀಡಿದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಗಳವರಿಗೆ ಸಾಷ್ಟಾಂಗ ಪ್ರಣಾಮಗಳೊಂದಿಗೆ ಕೃತಜ್ಞತೆಗಳು.

ಶ್ರೀಕ್ಷೇತ್ರ ಶೃಂಗೇರಿಯ ಆಡಳಿತಾಧಿಕಾರಿ ಶ್ರೀ ಗೌರೀಶಂಕರ್ ಮತ್ತು ಶ್ರೀಗಳ ಜೊತೆ ಆಗಮಿಸಿದ್ದ ಅವರ ಪರಿವಾರ ಮತ್ತು ಸಿಬ್ಬಂಧಿ ವರ್ಗಕ್ಕೆ, ಸತತ ಮಾರ್ಗದರ್ಶನ ನೀಡಿದ ಶ್ರೀಕ್ಷೇತ್ರ ಶೃಂಗೇರಿಯ ಪ್ರಾಂತ್ಯ ಧರ್ಮಾಧಿಕಾರಿಗಳಾದ ವೇದಬ್ರಹ್ಮಶ್ರೀ ವಾಗೀಶ ಶಾಸ್ತ್ರಿಮತ್ತು ಶ್ರೀ ಸತ್ಯ ಶಂಕರ ಬೊಳ್ಳಾವ ಇವರಿಗೆ, ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದ ಎಲ್ಲ ವೈದಿಕ ಬಳಗಕ್ಕೆ, ಕಾರ್ಯಕ್ರಮಕ್ಕೆ ವಸ್ತು ರೂಪದಲ್ಲಿ ಮತ್ತು ಧನಸಹಾಯ ನೀಡಿದ ಎಲ್ಲ ದಾನಿಗಳಿಗೆ, ವಿವಿಧ ಸೇವೆ ನಡೆಸಿಕೊಟ್ಟ ಭಕ್ತರಿಗೆ, ಸ್ವಯಂಸೇವಕರಾಗಿ ದುಡಿದ ಎಲ್ಲರಿಗೆ, ಆಗಮಿಸಿದ್ದ ಎಲ್ಲಭಗವದ್ಭಕ್ತರಿಗೆ, ಸಮಾಜದ ಬಂಧುಗಳಿಗೆ, ಶಾರದಾ ಮಂಟಪದ ಮೆನೇಜರ್ಸ್ ಹಾಗೂ ಅರ್ಚಕ ವೃಂದಕ್ಕೆ ದೇವರ ಆಭರಣ, ಪ್ರಭಾವಳಿ ಒಪ್ಪಿಸಿದ ಭಕ್ತರೆಲ್ಲರಿಗೆ, ನಿರಂತರ ಶ್ರಮವಹಿಸಿ ದುಡಿದ ಸಂಘದ ಆಡಳಿತ ಮಂಡಳಿಯ ನಿರ್ದೇಶಕರಿಗೆ, ಪದಾಧಿಕಾರಿಗಳಿಗೆ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಅನಂತ ಕೃತಜ್ಞತೆ ಸಲ್ಲಿಸಿದ್ದಾರೆ.

## ಶುಭ ವಿವಾಹ

ದಿ। ಸುಲೋಚನಾ ದೇವಿ ಮತ್ತು ದಿ। ಎಲ್ಲೂರು ಸದಾಶಿವರಾಯರ ಪುತ್ರ **ಚಿ। ಜ್ಯೋತಿಂದ್ರನಾಥ** ಮತ್ತು ಶ್ರೀಮತಿ ನಿರ್ಮಲ ಮತ್ತು ಶ್ರೀ ಪ್ರೊ। ಶಿವಬಸಯ್ಯ ಎಸ್. ಹಿರೇಮಠ ಅಮೀನಗಡ ಇವರ ಪುತ್ರಿ **ಚಿ। ಸೌ। ಸೌಮ್ಯ** ಇವರ ವಿವಾಹವು ತಾ.23.02.2023ರಂದು ಉಡುಪಿ ಪಡುಅಲೆವೂರಿನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮುಕಾಂಬಿಕಾ ಸಭಾಭವನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಜಾಹ್ನವಿ ಮತ್ತು ದಿ। ಕಾಗಾಪತಿ ಭಕ್ತ, ಜೇಮಶೆಡ್‌ಪುರ ಇವರ ಪುತ್ರ **ಚಿ। ಅಮರ** ಹಾಗೂ ಶ್ರೀಮತಿ ರಂಜಿನಿ ಮತ್ತು ಶ್ರೀ ಚಂದ್ರಶೇಖರ ವಿ. ರಾವ್ ಇವರ ಪುತ್ರಿ **ಚಿ। ಸೌ। ಚೈತ್ರ** ಇವರ ವಿವಾಹವು ತಾ. 06.03.2023ರಂದು ಮಣಿಪಾಲದ ಆರ್.ಎಸ್.ಬಿ. ಸಭಾಭವನದಲ್ಲಿ ಜರಗಿತು.

★★★★ ★★★★

ಕೋಟತಟ್ಟು ಪಡುಕೆರೆ ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ಕೃಷ್ಣಮೂರ್ತಿ ಉಪಾಧ್ಯರ ಪುತ್ರ **ಚಿ। ಅಭಿಷೇಕ ಉಪಾಧ್ಯ** ಹಾಗೂ ಬ್ರಹ್ಮಾವರ ನೀಲಾವರ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಎನ್. ಉಮೇಶ್ ರಾಯರ ಪುತ್ರಿ **ಚಿ। ಸೌ। ಶ್ವೇತಾ ಎನ್** ಇವರ ವಿವಾಹವು ತಾ.27.02.2023 ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

ಕವನ

## ಮನದ ಹನಿಗಳು

**–ರಶ್ಮಿ ರಾವ್, ಉಳಿಯಾರು ಬೆಂಗಳೂರು.**

ಎಷ್ಟು ಆಪ್ತರೆಂದುಕೊಂಡರೂ
ಕೆಲವೊಮ್ಮೆ ಅಂತರಂಗದ ಕವಲುಗಳು
ಬಹಳಷ್ಟು ಅಪರಿಚಿತವೆನ್ನಿಸಿ'
ಇವರು ನಾ ತಿಳಿದ ವ್ಯಕ್ತಿಯೆನ್ನುವ'
ಅಂದಾಜು ಹುಸಿಯಾಗುತ್ತದೆ.

★★★★ ★★★★

ಲೌಖಿಕ ಬದುಕಿನಲ್ಲಿ ಜೀವಿಸಿದ ಮೇಲೆ
ಅದರಲ್ಲೂ ವಿವಾಹವಾಗಿ, ಮಕ್ಕಳು
ಬಂಧು ಬಾಂಧವರು ಎಂದಾದ ಮೇಲೆ
ಬಂಧಿಸುವ ಭಾವದೆಳೆಗಳನ್ನು ತೊರೆದು
ವಿರಾಗಿ ನಡೆದು ಬಿಡುವುದು ಕಷ್ಟ ಸಾಧ್ಯ
ಸಂಸಾರ ಬಂಧನದೊಳಗೆ ಕಮಲದೆಲೆಯ
ಮೇಲಿನ ನೀರ ಬಿಂದು ತಾನೆಂಬ ಭಾವದಲ್ಲಿ
ಬದುಕುವ ಅಪೂರ್ವ ಪ್ರಯತ್ನ ಮಾಡಬಹುದಷ್ಟೇ!

★★★★ ★★★★

ಅಯ್ಯೋ ಇನ್ನೇನು ಗತಿ ಎಂದು ಮರುಗಿ
ಕೊರಗುವುದಕ್ಕಿಂತ,
ಯೋಚಿಸಿದ್ದನ್ನೇ ಯೋಚಿಸಿ
ಕೂಪಮಂಡೂಕವಾಗುವುದಕ್ಕಿಂತ
ಒಂದಿಷ್ಟು ಪರಿಸ್ಥಿತಿಯಾಚೆಗೆ ನೋಟ
ಬೀರುವುದನ್ನು ಅಭ್ಯಾಸ ಮಾಡಿಕೊಂಡರೆ
ಜೀವನದ ಗತಿ ಬದಲಾಗಬಹುದು.

★★★★ ★★★★

ನಾಳೆಗಳಲ್ಲಿ ಇನ್ನಷ್ಟು ಉತ್ತಮತೆಯನ್ನು
ಕಾಣುವ ಆಸೆಯಲ್ಲಿ ಇಂದಿನ ಸಂತೋಷವು
ಮನ ಮುಟ್ಟದೇ ಹೋಗುವುದು ತಪ್ಪು.

ಹಾಗೆಂದು ಮನುಷ್ಯ ಜೀವಿಗೆ ನಾಳೆಗಳ
ಆಸೆಯೂ ಇರಬಾರದು ಎಂದರೂ ಅದು
ಸರಿಯಲ್ಲವಷ್ಟೇ!

ತೃಪ್ತಿ ಎಂಬುದರ ವ್ಯಾಖ್ಯೆಯನ್ನು
ವೈಯುಕ್ತಿಕವಾಗಿ ಅರಿತು ನಮ್ಮ
ಮಿತಿಗೊಂದು ಗೆರೆ ಕೊರೆಯಬೇಕು

ನಿನ್ನೆಗಳ ಬಗ್ಗೆ ಹಳಹಳಿಕೆ ಇಲ್ಲದೆಯೇ,
ನಾಳೆಗಳ ಬಗ್ಗೆ ಆಶಾವಾದಿಗಳಾಗಿ ಇಂದಿನ
ವಾಸ್ತವತೆಯಲ್ಲಿ ಬದುಕಬೇಕು.

## ಬ್ರಹ್ಮೋಪದೇಶ

ಶ್ರೀಮತಿ ವಸಂತಿ ಮತ್ತು ಕೀ.ಶೇ. ಎ.ಕೆ. ಲಕ್ಷ್ಮೀನಾರಾಯಣ ಅವರ ಪೌತ್ರ ಶ್ರೀಮತಿ ಅಂಬಿಕಾ ಮತ್ತು ಶ್ರೀ ರಾಮಪ್ರಸಾದ್ ಇವರ ಪುತ್ರ ಚಿ। ಆಕಾಂಕ್ಷನ ಬ್ರಹ್ಮೋಪದೇಶವು ತಾ. 09.02.2023ರಂದು ಸುಳ್ಯ ಅಡ್ಕರ್ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ತಿಕೆಯ ಸಭಾಂಗಣದಲ್ಲಿ ಜರಗಿತು.




Ph : 98459 92859

CA

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.




## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.09-04-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.11-04-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.26-03-2023 ಮತ್ತು ತಾ.11-04-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.03.2023 | ಮೀನ ಸಂಕ್ರಮಣ | 01.04.2023 | ಸರ್ವೈಕಾದಶಿ |
| 21.03.2023 | ಅಮಾವಾಸ್ಯೆ | 06.04.2023 | ಹುಣ್ಣಿಮೆ |
| 22.03.2023 | ಚಾಂದ್ರ ಯುಗಾದಿ, ಚಾಂದ್ರ ಶೋಭಕೃತ್ ಸಂವತ್ಸರದ ಆರಂಭ, ಕಿರುನವರಾತ್ರಿ ಆರಂಭ ವಸಂತ ಋತು ಚೈತ್ರ ಮಾಸದ ಶುಕ್ಲ ಪಕ್ಷಾರಂಭ | 07.04.2023 | ವಸಂತ ಋತು ಚೈತ್ರ ಮಾಸದ ಕೃಷ್ಣ ಪಕ್ಷಾರಂಭ |
| | | 09.04.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.38 |
| | | 14.04.2023 | ಮೇಷ ಸಂಕ್ರಮಣ |
| 30.03.2023 | ಶ್ರೀರಾಮ ನವಮಿ | 15.04.2023 | ಸೌರಯುಗಾದಿ, ಸೌರ ಶೋಭಕೃತ್ ಸಂವತ್ಸರದ ಆರಂಭ |

## ನಿಧನ



ಶ್ರೀ ಉಪ್ಪುಂದ ಸುಬ್ಬರಾಯ ಶ್ಯಾನುಭಾಗ್‌ರ ಪತ್ನಿ ಶ್ರೀಮತಿ ಇಂದಿರಾರವರು ತಮ್ಮ 70ನೇ ವಯಸ್ಸಿನಲ್ಲಿ ತಾ.18.02.2023 ರಂದು ಮೈಸೂರಿನಲ್ಲಿ ನಿಧನರಾದರು. ಅವರು ಪತಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀಮತಿ ಮಾಲಿನಿ ರಘುಪತಿ ರಾವ್ ಮಾರ್ಪಳ್ಳಿಯವರು ತಮ್ಮ 70ನೇ ವಯಸ್ಸಿನಲ್ಲಿ ತಾ.20.02.2023ರಂದು ಮಣಿಪಾಲದಲ್ಲಿ ನಿಧನರಾದರು. ಅವರು ಪತಿ ಹಾಗೂ ಮೂವರು ಪುತ್ರರನ್ನು ಅಗಲಿರುತ್ತಾರೆ.

★★★★ ★★★★



ಚಂದ್ರಶೇಖರ ಮೇರ್ಟಾ ಅವರು ತಮ್ಮ 86ನೇ ವಯಸ್ಸಿನಲ್ಲಿ ತಾ.21.02.2023ರಂದು ಅಡೂರಿನ ಜೋಗಿಮೂಲೆಯಲ್ಲಿ ನಿಧನರಾದರು. ಅವರು ಪತ್ನಿ ಹಾಗೂ ಓರ್ವ ಪುತ್ರನನ್ನು ಅಗಲಿರುತ್ತಾರೆ.

★★★★ ★★★★



ಕಟಪಾಡಿ ಮೂಡಬೆಟ್ಟು ಶ್ರೀ ಹರಿಶ್ಚಂದ್ರರಾಯರು ತಮ್ಮ 78ನೇ ವಯಸ್ಸಿನಲ್ಲಿ ಕಟಪಾಡಿಯ ತಮ್ಮ ಸ್ವಗೃಹದಲ್ಲಿ ತಾ.20.02.2023ರಂದು ನಿಧನರಾದರು. ಕೆಇಬಿಯಲ್ಲಿ ಅಧಿಕಾರಿಯಾಗಿ ನಿವೃತ್ತರಾದ ಇವರು ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★




ದಿವಂಗತ ಮಾರೂರು ಶೇಷಪ್ಪಯ್ಯ ಹೆಬ್ಬಾರ್ ಅವರ ಪತ್ನಿ ಶಾಂಭವಿ ಎಸ್ ಹೆಬ್ಬಾರ್ ಅವರು ತಮ್ಮ 81ನೇ ವಯಸ್ಸಿನಲ್ಲಿ ತಾ.22.02.2023ರಂದು ಸಂಜೆ 5:13 ಗಂಟೆಗೆ ಬೆಳ್ವೆ (ಕುಂದಾಪುರ ತಾಲೂಕು) ನಲ್ಲಿ ನಿಧನರಾದರು. ಮೂವರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



ದಿವಂಗತ ಎಲ್ಲೂರು ವಿ.ಸುಬ್ಬಾರಾವ್‌ರವರ ಪತ್ನಿ ಶ್ರೀಮತಿ ಕುಮುದಾ ಎಸ್.ರಾವ್ ಅವರು ತಮ್ಮ 75ನೇ ವಯಸ್ಸಿನಲ್ಲಿ ಅವರ ಎಲ್ಲೂರಿನ ನಿವಾಸದಲ್ಲಿ ತಾ.03.03.2023ರಂದು ನಿಧನರಾದರು. ಅವರು ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ದಿ. ಹೆಜಮಾಡಿ ಭಾಗಿಲ್ತಾಯ ಲಕ್ಷ್ಮೀನಾರಾಯಣ ರಾವ್ ಅವರ ಪತ್ನಿ ಸುಧಾ ಎಲ್. ರಾವ್ ಅವರು ತಮ್ಮ 79ನೇ ವಯಸ್ಸಿನಲ್ಲಿ ತಾ.03.03.2023 ರಂದು ವಾಶಿಯಲ್ಲಿ ನಿಧನರಾದರು. ಅವರು ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ದಿವಂಗತ ಶಿರ್ವ ಗೋಪಿಚಂದ್ ರಾವ್ ಅವರ ಪತ್ನಿ ಶ್ರೀಮತಿ ಅಹಲ್ಯಾ ಅವರು ತಮ್ಮ 77ನೇ ವಯಸ್ಸಿನಲ್ಲಿ ತಾ.03.03.2023ರಂದು ಉಡುಪಿಯಲ್ಲಿ ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★

ಶ್ರೀ ಚೊಕ್ಕಾಡಿ ಸುರೇಶ್ ರಾವ್ ಬಾರ್ಕೂರು ಅವರು ತಮ್ಮ 61ನೇ ವಯಸ್ಸಿನಲ್ಲಿ ತಾ.03.03.2023 ರಂದು ಬಾರ್ಕೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★

ಶ್ರೀ ಮಟ್ಟಿ ರಮೇಶ್ ರಾವ್ ಅವರು ತಮ್ಮ 72ನೇ ವಯಸ್ಸಿನಲ್ಲಿ ತಾ.07.03.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

## "ಸ್ವಯಂಗತಂ ನೆನಪುಗಳ ಬುತ್ತಿ" ಪುಸ್ತಕ ಬಿಡುಗಡೆ



ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಜರಗಿದ ಕಾಸರಗೋಡಿನ ನಿವೃತ್ತ ವಿಜಯಾ ಬ್ಯಾಂಕ್ ಅಧಿಕಾರಿ ಶ್ರೀ ಮುರುಳೀಧರ ಹಾಗೂ ವಿದುಷಿ ಶ್ರೀಮತಿ ರಾಧಾ ಮುರುಳೀಧರ ಇವರ ವಿವಾಹ ವಾರ್ಷಿಕದ ಸುವರ್ಣ ಸಂಭ್ರಮದ ಕಾರ್ಯಕ್ರಮದಲ್ಲಿ ಶ್ರೀ ಮುರುಳೀಧರ ಕಾಸರಗೋಡು ವಿರಚಿತ "ಸ್ವಯಂಗತಂ ನೆನಪುಗಳ ಬುತ್ತಿ" ಎಂಬ ಪುಸ್ತಕವನ್ನು ಡಾ. ವರದರಾಜ ಚಂದ್ರಗಿರಿಯವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಡಾ। ಎ. ಪಿ. ಕೃಷ್ಣ ಶ್ರೀ ಸುಕುಮಾರ ಆಲಂಪಾಡಿ, ಡಾ। ಶೋಭಿತಾ ಸತೀಶ್, ಡಾ। ಸತೀಶ್ ರಾವ್, ಶ್ರೀಮತಿ ಶ್ವೇತಾ ನಾಗೇಶ್, ಶ್ರೀ ನಾಗೇಶ್ ಬಾಬು, ಶ್ರೀ ರಾಹುಲ್ ರಾವ್ ಹಾಗೂ ಸ್ಮೃತಿ ನಾಗೇಶ್ ಉಪಸ್ಥಿತರಿದ್ದರು.



ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿ ರಾಯೀ ರಾಜಕುಮಾರ್ ಮೂಡುಬಿದಿರೆ ರವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪದವಿ ಪೂರ್ವ ವಿದ್ಯಾಲಯದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಗ್ರಾಹಕ ಸಂಬಂಧಿ ಹಲವಾರು ಶೈಕ್ಷಣಿಕ ಮಾಹಿತಿಯನ್ನು ನೀಡಿ ಗ್ರಾಹಕ ಶಿಕ್ಷಣದ ಪೂರ್ಣ ಪರಿಚಯ ಮಾಡಿಕೊಟ್ಟರು.



ಬಾರಕೂರು ಬ್ರಾಹ್ಮಣ ಮಹಾಸಭಾ ಸೇವಾ ಟ್ರಸ್ಟ್ ರವರು ದಿನಾಂಕ 19.02.2023ರಂದು ಸಂಜೆ ಶ್ರೀ ತುಳುವೇಶ್ವರ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ವಾರ್ಷಿಕ ಸಮಾವೇಶ ಸಮಾರಂಭದಲ್ಲಿ ಸುವರ್ಣ ದಾಂಪತ್ಯ ಆಚರಿಸುತ್ತಿರುವ 6 ದಂಪತಿಗಳನ್ನು ಸಮ್ಮಾನಿಸಲಾಯಿತು. ನಮ್ಮವರಾದ ಶ್ರೀಮತಿ ಪ್ರೇಮ ಮತ್ತು ಗೋವಿಂದ ರಾವ್ ಹಾಗೂ ಶ್ರೀಮತಿ ಸುಮತಿ ಮತ್ತು ಶ್ರೀ ರಮೇಶ್ ರಾವ್ ಅವರನ್ನು ಈ ಸಂದರ್ಭದಲ್ಲಿ ಗುರುತಿಸಿ ಸನ್ಮಾನಿಸಿರುತ್ತಾರೆ.

## ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನ, ಪಡುಬಿದ್ರಿ ಶಿವರಾತ್ರಿ ಆಚರಣೆ



ತಾರೀಕು 18.02.2023ರ ಶನಿವಾರ ಶ್ರೀ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಉತ್ಸವವು ಜರಗಿತು. ಬೆಳಿಗ್ಗೆ 11.00 ಗಂಟೆಗೆ ಸಮಾಜದ ಪುರೋಹಿತರಾದ ಕೃಷ್ಣ ಭಟ್ ಹೆಜಮಾಡಿ ಇವರಿಂದ ಶ್ರೀ ರುದ್ರ ಹೋಮವು ಸಂಪನ್ನಗೊಂಡಿತು. ಶ್ರೀ ಕ್ಷೇತ್ರದ ಪುರೋಹಿತರಾದ ಜಗದಾಭಿರಾಮ ಸ್ವಾಮಿ ಮತ್ತು ಸುದರ್ಶನ್ ರಾವ್ ಇನ್ನರವರು ರುದ್ರಹೋಮದಲ್ಲಿ ಸಹಕರಿಸಿದರು. ಮಧ್ಯಾಹ್ನ 12.30ಕ್ಕೆ ಸರಿಯಾಗಿ ಶ್ರೀಮತಿ ವಿಜಯಲಕ್ಷ್ಮಿ ರಾಜಶೇಖರ ರಾವ್ ಹೆಜಮಾಡಿ ಇವರಿಂದ ಭಜನಾ ಕಾರ್ಯಕ್ರಮವು ಪ್ರಾರಂಭಗೊಂಡು, ವಿವಿಧ ಭಜನಾ ತಂಡದವರಿಂದ ರಾತ್ರಿ 7.30ರವರಿಗೆ ಭಜನಾ ಕಾರ್ಯಕ್ರಮವು ಜರಗಿತು. 8.00 ಗಂಟೆಗೆ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವರಿಗೆ ವಿಶೇಷ ರಂಗ ಪೂಜೆಯು ಜರಗಿತು. ಭಕ್ತಾಧಿಗಳಿಗೆ ರಾತ್ರಿ ಉಪಹಾರದ ವ್ಯವಸ್ಥೆಯನ್ನು ದೇವಸ್ಥಾನದ ವತಿಯಿಂದ ಮಾಡಲಾಯಿತು.

### ಕನ್ನಡ ಬಳಗ ಮತ್ತು ಮಾರ್ಪಳ್ಳಿ ಪ್ರಕಾಶನ

31, ಶ್ರೀ ಸಾಯಿ ಗಣೇಶ, 2ನೇ ಮುಖ್ಯರಸ್ತೆ, ಅಬ್ಬಕ್ಕನಗರ ಬಡಾವಣೆ, ಕೊಟ್ಟಾರ, ಮಂಗಳೂರು

ಹಾಗೂ

**ಸುಬ್ರಹ್ಮಣ್ಯ ಸಭಾ ಜೈಲ್‌ರೋಡ್,** ಕೊಡಿಯಾಲ್ ಬೈಲ್, ಮಂಗಳೂರು

ಇವರ ಸಂಯುಕ್ತ ಆಶ್ರಯದಲ್ಲಿ

### ಯುಗಾದಿ ಸಾಹಿತ್ಯೋತ್ಸವ

**ವಿಚಾರಗೋಷ್ಠಿ – ಕವಿಗೋಷ್ಠಿ**

ಉದ್ಘಾಟನೆ : **ಡಾ. ವಸಂತಕುಮಾರ ಪೆರ್ಲ,** ಹಿರಿಯ ಸಾಹಿತಿಗಳು ಹಾಗೂ ನಿವೃತ್ತ ನಿರ್ದೇಶಕರು, ಆಕಾಶವಾಣಿ ಮಂಗಳೂರು

ಮುಖ್ಯ ಅತಿಥಿಗಳು : **ಶ್ರೀ ಹರಿಕೃಷ್ಣ ಪುನರೂರು**
ಕನ್ನಡ ಸಾಹಿತ್ಯ ಪರಿಷತ್ತಿನ ಪೂರ್ವಾಧ್ಯಕ್ಷರು
**ಶ್ರೀಮತಿ ಕವಿತಾ ಶಾಸ್ತ್ರಿ**
ಮಾಜಿ ಲಯನ್ಸ್ ಗವರ್ನರ್, ಮಂಗಳೂರು

ಸಭಾಧ್ಯಕ್ಷತೆ : **ಶ್ರೀ ಎಂ. ಆರ್. ವಾಸುದೇವ,** ಕವಿಗಳು ಹಾಗೂ ಮಂಗಳೂರು ವಿಮಾನ ನಿಲ್ದಾಣದ ನಿವೃತ್ತ ನಿರ್ದೇಶಕರು

**ಸ್ಥಳ : ಶ್ರೀ ಸುಬ್ರಹ್ಮಣ್ಯ ಸದನ, ಕರಂಗಲ್ಪಾಡಿ, ಮಂಗಳೂರು**
**ದಿನಾಂಕ : 22.03.2023ನೇ ಬುಧವಾರ**
**ಸಮಯ : ಪೂರ್ವಾಹ್ನ 10 ಗಂಟೆಯಿಂದ**

ಪೂರ್ವಾಹ್ನ ವಿಚಾರಗೋಷ್ಠಿ, ಕವಿಗೋಷ್ಠಿ ಬಳಿಕ ಮಧ್ಯಾಹ್ನ 1.30ರಿಂದ ಭೋಜನ

ಸಾಹಿತ್ಯ ಪ್ರಿಯರಿಗೆ ಆದರದ ಸ್ವಾಗತ


### ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ : ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ

### ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

**Buying and selling shares as easy as checking your emails**


**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)




### RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

# "ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ"–ಚಿತ್ರಸಂಪದ



ನೂತನ ಬಿಂಬದ ಮೆರವಣಿಗೆ


ಶ್ರೀ ಶ್ರೀ ಜಗದ್ಗುರುಗಳಿಗೆ ಅದ್ದೂರಿ ಸ್ವಾಗತ


ಶ್ರೀ ಶ್ರೀ ಜಗದ್ಗುರುಗಳ ಶ್ರೀ ಶಾರದಾ ಮಂಟಪ ಪ್ರವೇಶ


ಶ್ರೀ ಶ್ರೀ ಜಗದ್ಗುರುಗಳಿಗೆ ಸಂಘದ ವತಿಯಿಂದ ಧೂಳೀಪಾದಪೂಜೆ


ಶ್ರೀ ಚಂದ್ರಮೌಳೀಶ್ವರ ಪೂಜೆ


ಶ್ರೀ ಶ್ರೀಗಳಿಂದ ಮಂಗಳಾರತಿ


ನಾಮಫಲಕ ಅನಾವರಣ


ಶೃಂಗೇರಿ ಭಜನಾ ಅರ್ಪಣೆ

## ವಿಶ್ವ ಸ್ಥಾನಿಕ ಸಮಾವೇಶದಲ್ಲಿ ಗೌರವಿಸಲ್ಪಟ್ಟ

**'ಸ್ಥಾನಿಕ ರತ್ನ' ಪ್ರಶಸ್ತಿ ಪುರಸ್ಕೃತ**

ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿಜಿಎಮ್,
ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷ, ಸಾಮಾಜಿಕ ಮುಂದಾಳು

**ಶ್ರೀ ಚಿಟ್ಪಾಡಿ ಸರ್ವೋತ್ತಮ ರಾವ್**



ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧನೆಗಾಗಿ ಸನ್ಮಾನಗೊಂಡವರು


ಖ್ಯಾತ ವೈದ್ಯ ಉಡುಪಿಯ
**ಡಾ। ಪಿ.ಜಿ.ರಾವ್**


ಖ್ಯಾತ ಸಾಹಿತಿ
**ಬೆಳ್ವೆ ನಾಗರತ್ನ ಹೆಬ್ಬಾರ್**

ಇವರ ವಿಶಿಷ್ಟ ಸಾಧನೆಗೆ ಹಾರ್ದಿಕ ಅಭಿನಂದನೆಗಳು

: ಶುಭ ಕೋರುವ :

**ಶ್ರೀ ಅಜಿತ್ ರಾವ್ ಮತ್ತು ಮನೆಯವರು, ಬೈಲೂರು, ಉಡುಪಿ**

## ಭಕ್ತಿ ಭಾವ ಸಂಗಮ







ಮಾರ್ಚ್ 5ರಂದು ಬೆಳ್ತಂಗಡಿಯಲ್ಲಿ ಜರುಗಿದ ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ವತಿಯಿಂದ ಭಕ್ತಿ ಭಾವ ಸಂಗಮ ಕಾರ್ಯಕ್ರಮವು ಪ್ರಕಾಶ್ ರಾವ್ ಉಡುಪಿ ಇವರ ನೇತೃತ್ವದಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ ಸಹಕಲಾವಿದರಾಗಿ ಶರಣ್ಯ ರಾವ್, ರಮ್ಯಾ ಲೋಕೇಶ್ ರಾವ್ ಭಾಗವಹಿಸಿದ್ದರು. ಪ್ರತಿಭಾ ಭಂಡಿಯವರು ಇದೇ ವೇದಿಕೆಯಲ್ಲಿ ನೃತ್ಯ ಕಾರ್ಯಕ್ರಮವನ್ನು ನೀಡಿದರು. ಈ ಸಂದರ್ಭದಲ್ಲಿ ಮಹಾಮಂಡಲದ ವತಿಯಿಂದ ಉಡುಪಿ ಸಂಘದ ಪದಾಧಿಕಾರಿಗಳನ್ನು ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

## ವಿಘ್ನೇಶ್ ಉಬರಳೆ ಇವರಿಗೆ ದ್ವಿತೀಯ ರ್‍ಯಾಂಕ್



ತಲಪಾಡಿ ಶಾರದಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿಘ್ನೇಶ್ ಉಬರಳೆ ಇವರು ಅನಿಮೇಷನ್ ಮತ್ತು ವಿಷುವಲ್ ಎಫೆಕ್ಟ್‌ನಲ್ಲಿ ಬಿ.ಎಸ್ಸಿ. ಪದವಿಯಲ್ಲಿ ಶೇಕಡ 80.79% ಅಂಕ ಪಡೆದು ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ. ಇವರು ದಾಮೋದರ ಉಬರಳೆ ಮತ್ತು ಶ್ರೀಮತಿ ವಿನುತ ದಂಪತಿಗಳ ಸುಪುತ್ರರಾಗಿದ್ದಾರೆ. ಈ ಅದ್ಭುತ ಸಾಧನೆಗಾಗಿ ಅವರಿಗೆ ಮತ್ತು ಅವರ ಹೆತ್ತವರಿಗೆ ಅಭಿನಂದನೆಗಳು.

### ಸಮಾವೇಶದ ಸಮಾರೋಪ

## ಮಕ್ಕಳಿಗೆ ಶಿಕ್ಷಣದ ಜೊತೆಗೆ ಧಾರ್ಮಿಕ ಪ್ರಜ್ಞೆ ಬೆಳೆಸಿ–ಶೃಂಗೇರಿ ಶ್ರೀಗಳು



ಸಮಾಜದ ಅಭಿವೃದ್ಧಿಗೆ ಯಾವುದರಿಂದ ಸಾಧ್ಯವೋ ಅದನ್ನು ಮಾಡಬೇಕು. ಐಕ್ಯತೆ ಇದ್ದಾಗ ಸಮಾಜದ ಅಭಿವೃದ್ಧಿ ಸಾಧ್ಯ. ಬ್ರಾಹ್ಮಣ ಪದ್ಧತಿಗಳನ್ನು ಯಥಾವತ್ತಾಗಿ ಆಚರಿಸುವ ಮೂಲಕ ಸಂಸ್ಕಾರ ಬೆಳೆಸಬೇಕು. ಅದರಲ್ಲೂ ಶಿಕ್ಷಣದೊಂದಿಗೆ ಜಪ, ತಪ, ಹಿಂದಿನ ಶಾಸ್ತ್ರ ಪುರಾಣಗಳನ್ನು ಮಕ್ಕಳಿಗೆ ಕಲಿಸಿ ಅವರನ್ನು ಸಮಾಜದಲ್ಲಿ ಸಂಸ್ಕಾರಯುತ ಪ್ರಜ್ಞೆಗಳನ್ನಾಗಿಸುವುದು ಹೆತ್ತವರ ಕರ್ತವ್ಯ ಎಂದು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳು ನುಡಿದರು.

ಅವರು ಮಾ.5 ರಂದು ಲ್ಯಾಲ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಎರಡು ದಿನ ನಡೆದ ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಆಶೀರ್ವಚನ ನೀಡಿದರು. ಶಾಸ್ತ್ರಗಳ ಫಲ ದೀರ್ಘಕಾಲ. ಇದನ್ನು ಅಧ್ಯಯನ ಮಾಡಬೇಕು. ಸಾಂಪ್ರದಾಯಿಕ ಆಚರಣೆಗಳು ನಮ್ಮದಾಗಬೇಕು. ಜೀವನದಲ್ಲಿ ಭಾಗ್ಯವಸ್ತುಗಳು ಸಿಗಲು ಧರ್ಮ ಮಾರ್ಗದಲ್ಲಿ ನಡೆಯಬೇಕು. ಮಕ್ಕಳಿಗೆ ಕನಿಷ್ಟ ಸಾಂಪ್ರದಾಯಿಕ ಶಿಕ್ಷಣವನ್ನು ಕಲಿಸಬೇಕು. ಆ ಮೂಲಕ ಮಕ್ಕಳನ್ನು ಸಮಾಜದ ಶ್ರೇಷ್ಠ ವ್ಯಕ್ತಿಗಳನ್ನಾಗಿಸಬೇಕು. ಸಾಂಪ್ರದಾಯಿಕ ಶಿಕ್ಷಣ ಪ್ರತಿ ಮನೆಯಲ್ಲಿ, ಪ್ರತಿ ಊರಿನಲ್ಲಿ ನಡೆಯಬೇಕು ಎಂದರು. ಸಮ್ಮೇಳನದಿಂದ ಸಮಾಜ ಐಕ್ಯಮತವಾಗಿ ಬೆಳೆಯಲಿ. ಬೆಳ್ತಂಗಡಿಯ ಸ್ಥಾನಿಕ ಸಮಾಜ ಮಠದೊಂದಿಗೆ ಗೌರವ ಭಾವನೆ ಹೊಂದಿದ್ದು ಇದರಿಂದಾಗಿ ಇಲ್ಲಿಗೆ ಪ್ರೀತಿಯಿಂದ ಬಂದಿದ್ದೇನೆ. ಇಲ್ಲಿನ ಶಾಸಕ ಹರೀಶ್ ಪೂಂಜ ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಿದ್ದಾರೆ ಅಲ್ಲದೆ ಮಠಕ್ಕೆ ರಾಜಕೀಯ ವ್ಯಕ್ತಿಯಾಗಿ ಬರದೆ ಭಕ್ತನಾಗಿ ಬರುತ್ತಾ ಮಠದಲ್ಲಿ ಗೌರವ ಭಾವನೆ ಹೊಂದಿದ್ದಾರೆ ಎಂದು ಶೃಂಗೇರಿ ಶ್ರೀಗಳು ಹೇಳಿದರು. ಇದೇ ಸಂದರ್ಭದಲ್ಲಿ ಉಡುಪಿ ಚಿಟ್ಪಾಡಿ ಸರ್ವೋತ್ತಮ ರಾವ್ ರವರಿಗೆ ಸ್ಥಾನಿಕ ರತ್ನ ಪ್ರಶಸ್ತಿ ನೀಡಲಾಯಿತು. ಉಡುಪಿ ಸ್ಥಾನಿಕ ಸಮಾಜದ ನಿವೇಶನಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಶ್ರೀಗಳು ಗೌರವಿಸಿದರು. ಶ್ರೀಗಳನ್ನು ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು.

ಸಮಾವೇಶದ ಪ್ರಮುಖರಾದ ಎನ್.ಕೆ. ಜಗನ್ನಿವಾಸ ರಾವ್ ಪುತ್ತೂರು, ಬೆಳ್ತಂಗಡಿ ಸ್ಥಾನಿಕ ಸಭಾದ ಪಿ. ರಾಧಾಕೃಷ್ಣ ರಾವ್ ಧರ್ಮಸ್ಥಳ, ಪಿ.ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ, ಎಂ. ಎಸ್. ಅರುಣ್ ಕುಮಾರ್, ಮಮತಾ ಹರೀಶ್ ರಾವ್, ಎಂ. ದೇವಾನಂದ ಭಟ್ ಬೆಳವಾಯಿ, ಉದಯ ಬಾರ್ಕೂರು, ಡಾ| ವೈ. ಸುದರ್ಶನ್ ರಾವ್ ಉಡುಪಿ, ಕೆ. ಮುರಲೀಧರ ರಾವ್ ನಿಟ್ಟೆ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಎಂ. ದೇವಾನಂದ ಭಟ್ ಸ್ವಾಗತಿಸಿದರು. ಬಿ.ಕೆ. ಧನಂಜಯ್ ರಾವ್ ಕಾರ್ಯಕ್ರಮ ನಿರೂಪಿಸಿದರು.


**ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)**

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ–576102.
ಫೋನ್ : 8971185844, 0820–2958444



ಸಮಾಜ ಬಾಂಧವರೇ,

ನಮ್ಮ ಸಮಾಜ ಬಾಂಧವರ ಹಾಗೂ ಗ್ರಾಹಕರ ಬೇಡಿಕೆಯಂತೆ ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣವನ್ನು ನವೀಕರಿಸಿ, ಹವಾನಿಯಂತ್ರಿತ(AC)ವಾಗಿ ಪರಿವರ್ತಿಸಿ ಸುಸಜ್ಜಿತಗೊಳಿಸುತ್ತಿದ್ದು, ಅಂದಾಜು ವೆಚ್ಚ ರೂ.98 ಲಕ್ಷ ಬೇಕಾಗಿರುತ್ತದೆ. ಅದಕ್ಕಾಗಿ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಣಗೊಳಿಸುತ್ತಿದ್ದು ಸಮಾಜ ಬಾಂಧವರಿಂದ ದೇಣಿಗೆ ಹಾಗೂ ಬಡ್ಡಿ ರಹಿತ ಸಾಲವನ್ನು ಸಂಗ್ರಹಿಸುತ್ತಿದ್ದೇವೆ. ಸಂಘದ ಮಹಾಸಭೆಯ ನಿರ್ಣಯದಂತೆ ಲಿಖಿತ ಒಪ್ಪಂದದ ಮೇರೆಗೆ ಬಡ್ಡಿರಹಿತ ಸಾಲವನ್ನು ಪಡೆದು ನಿರ್ದಿಷ್ಟ ಸಮಯದಲ್ಲಿ ಮರುಪಾವತಿಯನ್ನು ಮಾಡಲಿದ್ದೇವೆ. ಸಮಾಜಬಾಂಧವರ ಸಕಾರಾತ್ಮಕ ಸ್ಪಂದನೆಯನ್ನು ನಿರೀಕ್ಷಿಸುತ್ತೇವೆ.

ನಿಮ್ಮ ಅಮೂಲ್ಯ ಧನ ಸಹಾಯವನ್ನು ಕ್ಯೂಆರ್ ಕೋಡ್/ಚೆಕ್/ಖಾತೆಗೆ ನೇರ ಜಮೆ/ನಗದು ರೂಪದಲ್ಲಿ ನೀಡಬಹುದಾಗಿದೆ.

| | | |
|---|---|---|
| Account Name | : | Shree Sthanika Brahmana Sangha (R.) |
| SB A/c No. | : | SB A/C No. 8032500102881601 |
| Bank Address | : | Karnataka Bank, Kunjibettu Udupi |
| IFSC | : | IFSC Code : KARB0000803 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಕೆ. ಮಂಜುನಾಥ ಹೆಬ್ಬಾರ್, ಅಧ್ಯಕ್ಷರು (9611099894)
ಪಿ. ಪ್ರಭಾಕರ ಭಂಡಿ, ಕಾರ್ಯದರ್ಶಿ (9449254846)
CA ಗಣೇಶ್ ಹೆಬ್ಬಾರ್ ಕೆ., ಕೋಶಾಧಿಕಾರಿ (9845992859)





ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು





***Dr. Sanath S. Rao***
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE), OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



**With Best Compliments From :**

**BUILDING DREAMS, ENHANCING LIVES.**









Land® Trades
BUILDERS & DEVELOPERS
BUILDING TRUST, DELIVERING VALUE

NAKSHATRA — GANDHINAGAR —
SOLITAIRE — HATHILL —
HABITAT ONE 54 — DEREBAIL —
ANANTESSH — CAR STREET —

MANGALURU'S LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :



SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar